ವಿಜಯಪುರ | ಸಂಪುಟ 04 | ಸಂಚಿಕೆ 229 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಗುರುವಾರ, ನವೆಂಬರ್ 05, 2026

ವಿಜಯಪುರ ಜಿಲ್ಲೆಯ ಪತ್ರಿಕಾರಂಗದಲ್ಲಿ ಕಳೆದ ಸುಮಾರು ಮೂರು ದಶಕಗಳಿಂದ ಸಮರ್ಪಣಾ ಭಾವದಿಂದ ಯಾವುದೇ ಕಪ್ಪುಚುಕ್ಕೆಯಿಲ್ಲದಂತೆ ಸೇವೆಯಲ್ಲಿ ತೊಡಗಿರುವ ಹಿರಿಯ ಪತ್ರಕರ್ತ, 'ಉದಯರಶ್ಮಿ' ದಿನಪತ್ರಿಕೆ ಸಂಪಾದಕ ಇಂದುಶೇಖರ ಮಣೂರ ಅವರ ಕಾರ್ಯತತ್ಪರತೆ ಶ್ಲಾಘನೀಯ.



■ ಸಂಗಮೇಶ ಬಬಲೇಶ್ವರ
ನಿಕಟಪೂರ್ವ ಅಧ್ಯಕ್ಷರು
ಕರ್ನಾಟಕ ಬಾಲವಿಕಾಸ ಅಕಾಡೆಮಿ

ಕರ್ನಾಟಕ ಬಾಲವಿಕಾಸ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಅಭಿಮತ

ಇಂದುಶೇಖರ ಮಣೂರ ಕಾರ್ಯತತ್ಪರತೆ ಶ್ಲಾಘನೀಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಪತ್ರಿಕಾರಂಗದಲ್ಲಿ ಕಳೆದ ಸುಮಾರು ಮೂರು ದಶಕಗಳಿಂದ ಸಮರ್ಪಣಾ ಭಾವದಿಂದ ಯಾವುದೇ ಕಪ್ಪುಚುಕ್ಕೆಯಿಲ್ಲದಂತೆ ಸೇವೆಯಲ್ಲಿ ತೊಡಗಿರುವ ಹಿರಿಯ ಪತ್ರಕರ್ತ ಇಂದುಶೇಖರ ಮಣೂರ ಅವರ ಕಾರ್ಯತತ್ಪರತೆ ಶ್ಲಾಘನೀಯ ಎಂದು ಕರ್ನಾಟಕ ಬಾಲವಿಕಾಸ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಅವರು ಅಭಿಪ್ರಾಯಪಟ್ಟರು.

ಬುಧವಾರ ನಗರದ ತಮ್ಮ ಗೃಹಕಚೇರಿಯಲ್ಲಿ ಇತ್ತೀಚೆಗೆ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾಡಳಿತದಿಂದ "ಜಿಲ್ಲಾ ರಾಜ್ಯೋತ್ಸವ" ಪುರಸ್ಕಾರ ಪಡೆದ ಪ್ರಯುಕ್ತ 'ಉದಯರಶ್ಮಿ' ದಿನಪತ್ರಿಕೆ ಸಂಪಾದಕ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ ದಂಪತಿಯನ್ನು ಸನ್ಮಾನಿಸಿ ಅವರು ಮಾತನಾಡಿದರು.

ಸನ್ಮಾನಕ್ಕೆ ಪ್ರತಿಯಾಗಿ ಮಾತನಾಡಿದ ಇಂದುಶೇಖರ ಮಣೂರ ಅವರು, ರಾಜ್ಯೋತ್ಸವ ಗೌರವ ಹಾಗೂ ತಮ್ಮ ಸಮಾಜಮುಖಿ ಕಾರ್ಯಗಳಿಂದ ಹೆಸರಾಗಿರುವ ಮಾನವೀಯ ಕಳಕಳಿಯ ಸಂಗಮೇಶ ಬಬಲೇಶ್ವರ ಅವರ ಈ ಸನ್ಮಾನ ತಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ. ತಮ್ಮ ಕ್ಷೇತ್ರದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಸೇವೆಗೈಯಲು ಪ್ರೇರಣೆ ನೀಡಿದೆ ಎಂದು ಹೇಳಿದರು.

'ಉದಯರಶ್ಮಿ' ಪತ್ರಿಕೆಯ ಪ್ರಕಾಶಕಿ ಶೈಲಾ ಮಣೂರ ಸೇರಿದಂತೆ ಕಚೇರಿ ಸಿಬ್ಬಂದಿ ಇದ್ದರು.

ಕಾಂಗ್ರೆಸ್ ಸರ್ಕಾರ ಹೇಳಿದ್ದೊಂದು, ಮಾಡಿದ್ದೊಂದು । ಗ್ಯಾರಂಟಿ ಯೋಜನೆ ನಿರ್ವಹಿಸಲಾಗಲಿದ್ದರೆ ಕ್ಷಮೆ ಕೇಳಿ ರದ್ದು ಮಾಡಿ । ವಿಪಕ್ಷ ನಾಯಕ ಆರ್.ಅಶೋಕ ಒತ್ತಾಯ

ಬೆಲೆ ಏರಿಕೆ ವಾಪಸ್ ಪಡೆಯಲು ಬಿಜೆಪಿ ಆಗ್ರಹ

ಬೆಂಗಳೂರು: ನಿಮ್ಮ ಗ್ಯಾರಂಟಿಗಳಿಗಾಗಿ ಜನರು ಬೆಲೆ ತೆರಬೇಕಾಗಿದೆ. ನಿಮ್ಮ ಸುಳ್ಳಿನ ಕಾಂಗ್ರೆಸ್ ಸರ್ಕಾರಕ್ಕೆ ಗ್ಯಾರಂಟಿಗಳ ನಿರ್ವಹಿಸಲು ಆಗದೇ ಇದ್ದರೆ, ಸಾರ್ವಜನಿಕರ ಕ್ಷಮೆ ಕೇಳಿ ಅವುಗಳನ್ನು ರದ್ದು ಮಾಡಿ, ಬೆಲೆ ಏರಿಕೆಗಳನ್ನು ವಾಪಸ್ ಪಡೆಯಿರಿ ಎಂದು ರಾಜ್ಯ ಸರ್ಕಾರಕ್ಕೆ ಬಿಜೆಪಿ ಆಗ್ರಹಿಸಿದೆ.

ಬೆಲೆ ಏರಿಕೆ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು, ಹೇಳುವುದೊಂದು, ಮಾಡುವುದೊಂದು ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಹಾಲಿನ ದರವನ್ನು ಲೀಟರ್‌ಗೆ 8 ರೂ. ಹೆಚ್ಚಿಸುವುದಾಗಿ ಹೇಳಿದ್ದ ಸರ್ಕಾರ, ಕೆಲವು ವಿಧದ ಹಾಲಿನ ದರವನ್ನು 12ರಿಂದ 13 ರೂ.ವರೆಗೆ ಏರಿಸಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಲೆಕ್ಕಾಚಾರಗಳನ್ನು ತಿರುಚಿ, ತಾವು ಮಾಡಿದ ಸಾಲ ಮಿತಿಯಲ್ಲೇ ಇದೆ ಎಂದು ತೋರಿಸಿದ್ದರು. ಇದೀಗ ನಿಮ್ಮ ಸರ್ಕಾರವೂ ಬೆಲೆ ಏರಿಕೆಯಲ್ಲೂ ಗೋಲ್‌ಮಾಲ್ ಲೆಕ್ಕಾಚಾರ ಮಾಡಿ ಮ್ಯಾಜಿಕ್ ಮಾಡಿದೆ ಎಂದು ಆರೋಪಿಸಿದ್ದಾರೆ.

ಇದೇ ವೇಳೆ ಸರ್ಕಾರ ಪ್ರಕಟಿಸಿರುವ ದರ ಏರಿಕೆಯ ವಿವರಗಳನ್ನು ಉಲ್ಲೇಖಿಸಿರುವ ಅಶೋಕ್ ಅವರು,



ಸ್ಟ್ಯಾಂಡರ್ಡ್ ಹಾಲಿನ ದರವನ್ನು ಲೀಟರ್‌ಗೆ 52 ರೂ.ನಿಂದ 64 ರೂ.ಗೆ ಏರಿಸಲಾಗಿದ್ದು, 12 ರೂ. ಹೆಚ್ಚಳವಾಗಿದೆ. ಶುಭಂ ಹಾಲಿನ ದರ 53 ರೂ.ನಿಂದ 66 ರೂ.ಗೆ ಏರಿಕೆಯಾಗಿದ್ದು, 13 ರೂ. ಹೆಚ್ಚಿಸಲಾಗಿದೆ. ಮೊಸರಿನ ಅರ್ಧ ಲೀಟರ್ ಪ್ಯಾಕೆಟ್ ದರ 28 ರೂ.ನಿಂದ 34 ರೂ.ಗೆ ಏರಿಕೆಯಾಗಿದ್ದು, 6 ರೂ. ಹೆಚ್ಚಳವಾಗಿದೆ.

ಗಣಿತದ ಲೆಕ್ಕಾಚಾರದಲ್ಲಿ ಪಳಗಿರುವ ಕಾಂಗ್ರೆಸ್, ಜನರ ಮುಂದೆ ಒಂದು ಹೇಳಿ, ಹಿಂದಿನಿಂದ ಮನಬಂದಂತೆ ಬೆಲೆ ಏರಿಕೆ ಮಾಡಿದೆ. ಸರ್ಕಾರದ ಗ್ಯಾರಂಟಿ ಯೋಜನೆಗಳಿಗಾಗಿ ಜನರು ಈ ಬೆಲೆ ತೆರಬೇಕಾಗಿದೆ ಎಂದು ಟೀಕಿಸಿದ್ದಾರೆ.

ಇದೇ ರೀತಿಯಲ್ಲಿ ಬಸ್ ಪ್ರಯಾಣ ದರ ಏರಿಕೆಯಲ್ಲೂ ಹೇಳುವುದೊಂದು, ಮಾಡುವುದೊಂದು ಎಂಬ ವಂಚನೆ ನಡೆಯುವುದು ಖಚಿತ. ಗ್ಯಾರಂಟಿ ಯೋಜನೆಗಳನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ ಸಾರ್ವಜನಿಕರ ಕ್ಷಮೆ ಕೇಳಿ ಅವುಗಳನ್ನು ರದ್ದುಗೊಳಿಸಬೇಕು ಹಾಗೂ ಬೆಲೆ ಏರಿಕೆಗಳನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಬ್ರ್ಯಾಂಡ್ ಬೆಂಗಳೂರು ಹೆಸರಿನಲ್ಲಿ ಜನರ ಕಣ್ಣಿಗೆ ಮಣ್ಣೆರಚುವುದನ್ನು ನಿಲ್ಲಿಸಿ

ಬ್ರ್ಯಾಂಡ್ ಬೆಂಗಳೂರು ಹೆಸರಿನಲ್ಲಿ ಜನರ ಕಣ್ಣಿಗೆ ಮಣ್ಣೆರಚುವುದನ್ನು ನಿಲ್ಲಿಸಬೇಕು. ಘೋಷಿಸಿದ ಯೋಜನೆಗಳನ್ನು ಕಾಲಮಿತಿಯಲ್ಲಿ ಜಾರಿಗೊಳಿಸುವ ಸಾಮರ್ಥ್ಯ ಇಲ್ಲದಿದ್ದರೆ ಮತ್ತಷ್ಟು ಸುಳ್ಳು ಭರವಸೆಗಳನ್ನು ನೀಡುವುದಾದರೂ ಏಕೆ ಎಂದು ವಿಪಕ್ಷ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.



ಘೋಷಣೆ ಮಾತ್ರ ಇದೆ, ಯೋಜನೆ ಜಾರಿಯಿಲ್ಲ; ಪ್ರಚಾರ ಮಾತ್ರ ಇದೆ, ಅಭಿವೃದ್ಧಿಯಿಲ್ಲ. ಕಾಂಗ್ರೆಸ್ ಸರ್ಕಾರ ಕರ್ನಾಟಕವನ್ನು ಅಭಿವೃದ್ಧಿಯಲ್ಲಿ 20 ವರ್ಷ ಹಿಂದಕ್ಕೆ ಕೊಂಡೊಯ್ಯುತ್ತಿದೆ. ಬೆಂಗಳೂರಿನ ಜನರಿಗೆ ಮುಖ್ಯಮಂತ್ರಿ ಉತ್ತರ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ವಿಜಯಪುರ ಜಿಲ್ಲೆಗೂ ನ್ಯಾಯಯುತ ಅವಕಾಶ ಕಲ್ಪಿಸಿ :ಕೊಳಾರಿ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನಗರದ ಬಸವೇಶ್ವರ ಸರ್ಕಲ್ ಹತ್ತಿರ ಗೋಕಾಕ ಚಳವಳಿಯ ರೂವಾರಿ ಶ್ರೀ ರೇ. ಚ. ರೇವಡಿಗಾರ ಪ್ರತಿಷ್ಠಾನ ಹಾಗೂ 371(ಜೆ) ಹೋರಾಟ ಸಮಿತಿ ನೇತೃತ್ವದಲ್ಲಿ 32 ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಬಂಜಾರ ಸಮಾಜದ ವತಿಯಿಂದ ಬೆಂಬಲ ಸೂಚಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘದ ವಿಜಯಪುರ ಜಿಲ್ಲಾಧ್ಯಕ್ಷರು ಹಾಗೂ ಯರಗಲ್ ಬಿ.ಕೆ. ಜಿಪಂ ಕ್ಷೇತ್ರದ ಆಕಾಂಕ್ಷಿ ಡಾ. ಬಸವರಾಜ ಚವ್ಹಾಣ ಮಾತನಾಡಿ, ಡಾ. ನಂಜುಂಡಪ್ಪ ವರದಿ ಪ್ರಕಾರ ವಿಜಯಪುರ ಜಿಲ್ಲೆಯನ್ನು ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಮಾದರಿಯಲ್ಲಿ ವಿಜಯಪುರ ಜಿಲ್ಲೆಯನ್ನು ಸಹ ಸಂವಿಧಾನದ 371(ಜೆ) ವಿಶೇಷ ಸ್ಥಾನಮಾನದ ವ್ಯಾಪ್ತಿಗೆ ಸೇರಿಸಬೇಕು ಎಂದು ಅವರು ಸರ್ಕಾರವನ್ನು ಒತ್ತಾಯಿಸಿದರು.

ಆಲಮೇಲ ಗ್ಯಾರೆಂಟಿ ಸಮಿತಿ ಮಾಜಿ ಅಧ್ಯಕ್ಷ ಅಶೋಕ ಕೊಳಾರಿ ಮಾತನಾಡಿ, ವಿಜಯಪುರ ಜಿಲ್ಲೆ ಶೈಕ್ಷಣಿಕ, ಆರ್ಥಿಕ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಯ ಅಗತ್ಯವನ್ನು ಹೊಂದಿದೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ 371(ಜೆ) ಕಲಂ ಅಡಿಯಲ್ಲಿ ದೊರೆಯುತ್ತಿರುವ ವಿಶೇಷ ಸೌಲಭ್ಯಗಳ ಮಾದರಿಯಲ್ಲಿ ವಿಜಯಪುರ ಜಿಲ್ಲೆಗೂ ನ್ಯಾಯಯುತ ಅವಕಾಶ ಕಲ್ಪಿಸಬೇಕು. ಇದಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ ಅಗತ್ಯ ಸಂವಿಧಾನಾತ್ಮಕ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಆಲಮೇಲ ತಾಪಂ ಮಾಜಿ ಸದಸ್ಯ ಶಿವಾನಂದ ಜಗತಿ, ನಿವೃತ್ತ ಪೊಲೀಸ ಅಧಿಕಾರಿ ಎಂ.ಎಂ.ಹಂಗರಗಿ ಮಾತನಾಡಿದರು.

ಈ ಸಂದರ್ಭದಲ್ಲಿ ರಂಗನಾಥ ತೊರ್ಪೆ, ವ್ಹಿ.ಬಿ.ಕುರಡಿ, ಪಂಡಿತ ಯಂಪೂರೆ, ಗುರುರಾಜ್ ಪಡಶೆಟ್ಟಿ, ಸಂಗಪ್ಪ ಬ್ಯಾಕೋಡ, ಚಂದ್ರಶೇಖರ ಬಡಾನೂರ, ಆನಂದ ಶಾಬಾದಿ, ಮಂಜು ರಾಠೋಡ, ಸಂಜೀವ ಚವ್ಹಾಣ, ದನಸಿಂಗ ರಾಠೋಡ, ಸಾಯಬಣ್ಣಾ ದೇವರಮನಿ ಸೇರಿದಂತೆ ಅನೇಕರಿದ್ದರು.

ವಿಜಯಪುರ ಜಿಲ್ಲಾಧಿಕಾರಿ ಡಾ. ಆನಂದ ಕೆ. ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ

ಮೆಗಾ ಮಾರ್ಕೆಟ್ & ಕುಡಿವ ನೀರಿನ ಯೋಜನೆ ಕಾಲಮಿತಿಯಲ್ಲಿ ಪೂರ್ಣಗೊಳಿಸಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಿಡಗುಂದಿ ಹಾಗೂ ಬಸವನ ಬಾಗೇವಾಡಿಯಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳು ಮತ್ತು ಪಟ್ಟಣದ ಕುಡಿಯುವ ನೀರಿನ ಯೋಜನೆಗಳನ್ನು ನಿಗದಿತ ಕಾಲಮಿತಿಯೊಳಗೆ ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು

ಬುಧವಾರ ನಿಡಗುಂದಿ ಹಾಗೂ ಬಸವನ ಬಾಗೇವಾಡಿ ಪಟ್ಟಣಕ್ಕೆ ಭೇಟಿ ನೀಡಿದ ಅವರು, ಜಲಧಾರೆ ಹಾಗೂ ಅಮೃತ 2.0 ಯೋಜನೆಗಳಡಿ ಕೈಗೊಂಡಿರುವ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು.

ರೈತರ ಜಮೀನುಗಳಲ್ಲಿ ಪೈಪ್‌ಲೈನ್ ಅಳವಡಿಸುವ ಸಂದರ್ಭದಲ್ಲಿ ಕೆಲವೆಡೆ ಉಂಟಾಗುತ್ತಿರುವ ಅಡಚಣೆಗಳನ್ನು ಗಮನಿಸಿ, ರೈತರೊಂದಿಗೆ ಸಮನ್ವಯ ಸಾಧಿಸಿ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚಿಸಿದರು. ಹೆಬ್ಬಾಳ ಹಾಗೂ ಜಲಧಾರೆ ಮತ್ತು ಅಮೃತ 2.0 ಯೋಜನೆಗಳ ಕಾಮಗಾರಿ ಶೀಘ್ರ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ನಿಡಗುಂದಿ ಮೆಗಾ ಮಾರ್ಕೆಟ್ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಮುಂದಿನ ಒಂದು ತಿಂಗಳೊಳಗಾಗಿ ಸ್ಲ್ಯಾಬ್ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಗಡುವು ನೀಡಿದರು. ಕಾಮಗಾರಿಯಲ್ಲಿ ನಿಗದಿತ ಗುಣಮಟ್ಟದ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ನಿರ್ಮಾಣದ ಗುಣಮಟ್ಟ ಖಾತರಿಪಡಿಸಲು ಮೂರನೇ ವ್ಯಕ್ತಿಯಿಂದ ತಾಂತ್ರಿಕ ತಪಾಸಣೆ ಕಡ್ಡಾಯವಾಗಿ ನಡೆಸಬೇಕು ಎಂದು ಸೂಚಿಸಿದರು.



ನಂತರ ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಅಲ್ಲಿ ಸಿದ್ಧಪಡಿಸಲಾದ ಆಹಾರದ ಗುಣಮಟ್ಟವನ್ನು ಪರಿಶೀಲಿಸಿ, ಸ್ವತಃ ಆಹಾರ ಸೇವಿಸುವ ಮೂಲಕ ಆಹಾರ ಗುಣಮಟ್ಟ ಪರೀಕ್ಷಿಸಿದರು. ಮೆನು ಪ್ರಕಾರ ಹಾಗೂ ಆಹಾರ ಪದ್ಧತಿಗೆ ಅನುಗುಣವಾಗಿ ಚಪಾತಿ, ರೊಟ್ಟಿ ಸೇರಿದಂತೆ ವಿವಿಧ ಖಾದ್ಯಗಳನ್ನು ಗುಣಮಟ್ಟದೊಂದಿಗ ಒದಗಿಸುವಂತೆಯೂ ಹಾಗೂ ಶುಚಿತ್ವ ಕಾಪಾಡಿಕೊಳ್ಳಬೇಕು ಸೂಚಿಸಿದರು.

ಈ ಸಂದರ್ಭದಲ್ಲಿ ವಿಜಯಪುರ ಉಪ ವಿಭಾಗಾಧಿಕಾರಿ ಜುಫಿಶಾನ್ ಹಕ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದಿನ್ ಸೌದಾಗರ, ಜಲಮಂಡಳಿಯ ಕಾರ್ಯನಿರ್ವಾಹಕ ಅಭಿಯಂತರ ರಾಮರಾವ್ ರಾಠೋಡ ಸೇರಿದಂತೆ ನಿಡಗುಂದಿ ಹಾಗೂ ಬಸವನ ಬಾಗೇವಾಡಿ ತಾಲೂಕುಗಳ ಮುಖ್ಯಾಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ಸಿಬ್ಬಂದಿ ಉಪಸ್ಥಿತರಿದ್ದರು.



ಜನರ ಪಾಲಿಗೆ ವರದಾನವಾದ ಬಿ.ಎಲ್.ಡಿ.ಇ ಆಸ್ಪತ್ರೆ

■ ಉದಯರಶ್ಮಿ ದಿನಪತ್ರಿಕೆ

ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ಕುಲಪತಿ ಡಾ. ಅರುಣ ಇನಾಮದಾರ ಹೇಳಿಕೆ

ವಿಜಯಪುರ: ಸಜ್ಜನ ರಾಜಕಾರಣಿ ಮತ್ತು ಶಿಕ್ಷಣ ಪ್ರೇಮಿ ದಿ. ಬಿ. ಎಂ. ಪಾಟೀಲ ಅವರು 40 ವರ್ಷಗಳ ಹಿಂದೆ ಪ್ರಾರಂಭಿಸಿರುವ ಬಿ.ಎಲ್.ಡಿ.ಇ ಆಸ್ಪತ್ರೆ ವಿಜಯಪುರ ಮತ್ತು ಸುತ್ತಮುತ್ತಲಿನ ಜಿಲ್ಲೆಯ ಜನರ ಪಾಲಿಗೆ ವರದಾನವಾಗಿದೆ ಎಂದು ಬಿ. ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ಕುಲಪತಿ ಡಾ. ಅರುಣ ಚಂ. ಇನಾಮದಾರ ಹೇಳಿದ್ದಾರೆ.

ಬುಧವಾರ ನಗರದ ರಜಪೂತಗಲ್ಲಿಯಲ್ಲಿರುವ ಶ್ರೀ ಬಸವೇಶ್ವರ ಕನ್ನಡ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಮಾಜಿ ಸಚಿವ ದಿ. ಶ್ರೀ ಬಿ ಎಂ ಪಾಟೀಲ ಮತ್ತು ವಿಧಾನ ಪರಿಷತ ಶಾಸಕ ಹಾಗೂ ಬಿ.ಎಲ್.ಡಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ ಅವರ ಜನ್ಮದಿನದ ಅಂಗವಾಗಿ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ ಹಾಗೂ ಆರೋಗ್ಯ ಫಾರ್ಮಸಿ ವತಿಯಿಂದ ಆಯೋಜಿಸಲಾದ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯ ಕಂಡ ಅತೀ ಸಜ್ಜನ ರಾಜಕಾರಣಿ ಮತ್ತು ಶಿಕ್ಷಣ ಪ್ರೇಮಿ ದಿ. ಬಿ ಎಂ ಪಾಟೀಲರು 40 ವರ್ಷಗಳ ಹಿಂದೆ ಪ್ರಾರಂಭಿಸಿದ ಬಿ.ಎಲ್.ಡಿ.ಇ ಆಸ್ಪತ್ರೆ ಇಂದು ಎಲ್ಲರಿಗೂ ಆರೋಗ್ಯ ಸೇವೆ ಒದಗಿಸುತ್ತಿದೆ. ಉಚಿತ ಆರೋಗ್ಯ ತಪಾಸಣೆ ಶಿಬಿರಗಳ ಮೂಲಕ ನಗರವಷ್ಟೇ ಅಲ್ಲ ಗ್ರಾಮೀಣ ಭಾಗದ ಜನರ ಪಾಲಿಗೂ ವರದಾನವಾಗಿದೆ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅವರು ಜನರ ಅಹವಾಲುಗಳಿಗೆ ಸ್ಪಂದಿಸುವ ಮೂಲಕ ಸಮಾಜ ಜನಪರ ಸೇವೆ ಮಾಡುತ್ತಿದ್ದಾರೆ. ಇಬ್ಬರೂ ಗಣ್ಯರ ಜನ್ಮದಿನದ ಅಂಗವಾಗಿ ಆಯೋಜಿಸಲಾಗಿರುವ ಇಂಥ ಆರೋಗ್ಯ ಶಿಬಿರಗಳನ್ನು ಶಿಬಿರಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಹೇಳಿದರು.ದಿ. ಬಿ. ಎಂ. ಪಾಟೀಲ ಅವರ ಪುತ್ರಿ ಕಲ್ಪನಾ ಮಹೇಶಗೌಡ ಪಾಟೀಲ ಆರೋಗ್ಯ ಶಿಬಿರಕ್ಕೆ ಚಾಲನೆ ನೀಡಿದರು. ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಎಸ್. ಎನ್. ಬೆಂಟೂರ ಆಸ್ಪತ್ರೆಯಲ್ಲಿ ಸಿಗುವ ಉಚಿತ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ, ಪ್ರಿನ್ಸಿಪಾಲ ಡಾ. ತೇಜಸ್ವಿನಿ ವಲ್ಲಭ, ಆಡಳಿತಾಧಿಕಾರಿ ವಿಲಾಸ ಬಗಲಿ, ಸಂಸ್ಥೆಯ ಕಾನೂನು ಸಹಸಲಹೆಗಾರ ಸೂರ್ಯಕಾಂತ ಬಿರಾದಾರ ಮುಂತಾದವರು ಉಪಸ್ಥಿತರಿದ್ದರು.

ಈ ಶಿಬಿರದಲ್ಲಿ ಒಟ್ಟು 220 ರೋಗಿಗಳು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಶೆಳ್ಳಗಿ-ಕರಿಭಾವಿ-ಅಗತೀರ್ಥ-ಹುಣಸಗಿ ಸಂಪರ್ಕ ರಸ್ತೆಗೆ ಚಾಚಿಕೊಂಡ ಮುಳ್ಳು ಕಂಟಿಗಳು । ವಾಹನ ಸಂಚಾರಕ್ಕೆ ತೀವ್ರ ತೊಂದರೆ । ರಸ್ತೆಗೆ ವಾಲಿರುವ ಮುಳ್ಳು ಕಂಟಿ ತೆರವಿಗೆ ಒತ್ತಾಯ

ರಸ್ತೆಗೆ ಚಾಚಿದ ಮುಳ್ಳು ಕಂಟಿಗಳಿಂದ ಸಂಚಾರಕ್ಕೆ ಸಂಚಕಾರ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ತಾಲೂಕಿನ ಶೆಳ್ಳಗಿ ಗ್ರಾಮದಿಂದ ಕರಿಭಾವಿ ಹಾಗೂ ಅಗತೀರ್ಥ ಗ್ರಾಮಗಳ ಮೂಲಕ ಹುಣಸಗಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯ ಎರಡೂ ಬದಿಗಳಲ್ಲಿ ಬೆಳೆದಿರುವ ಮುಳ್ಳು ಕಂಟಿಗಳು ರಸ್ತೆಯ ಮೇಲೆ ಚಾಚಿಕೊಂಡಿದ್ದು, ನಿತ್ಯ ಸಂಚರಿಸುವ ವಾಹನ ಸವಾರರು ಹಾಗೂ ಪ್ರಯಾಣಿಕರಿಗೆ ತೀವ್ರ ತೊಂದರೆ ಉಂಟುಮಾಡುತ್ತಿವೆ. ಅದರಲ್ಲೂ ಬಸ್‌ಗಳು ಸಂಚರಿಸುವ ಸಂದರ್ಭದಲ್ಲಿ ಎದುರಿನಿಂದ ಬರುವ ವಾಹನಗಳು ಸರಿಯಾಗಿ ಕಾಣಿಸದಿರುವುದು ಅಪಘಾತದ ಆತಂಕಕ್ಕೆ ಕಾರಣವಾಗಿದೆ.

ಶೆಳ್ಳಗಿ, ಕರಿಭಾವಿ ಹಾಗೂ ಅಗತೀರ್ಥ ಗ್ರಾಮಗಳ ಮೂಲಕ ಹುಣಸಗಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಪ್ರಮುಖ ಸಂಪರ್ಕ ಮಾರ್ಗವಾಗಿದೆ. ಪ್ರತಿದಿನ ಬಸ್‌ಗಳು, ಕಾರುಗಳು, ದ್ವಿಚಕ್ರ ವಾಹನಗಳು ಸೇರಿದಂತೆ ನೂರಾರು ವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತವೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಿಗಳು, ರೈತರು ಹಾಗೂ ಸಾರ್ವಜನಿಕರು ತಮ್ಮ ನಿತ್ಯದ ಕೆಲಸ ಕಾರ್ಯಗಳಿಗಾಗಿ ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ.

ಆದರೆ ರಸ್ತೆ ಬದಿಗಳಲ್ಲಿ ಬೆಳೆದಿರುವ ಮುಳ್ಳು ಕಂಟಿ ಹಾಗೂ ಗಿಡಗಂಟಿಗಳು ರಸ್ತೆಯ ಮೇಲೆ ವಾಲಿಕೊಂಡಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿವೆ. ವಿಶೇಷವಾಗಿ ಎದುರಿನಿಂದ ಬಸ್‌ಗಳು ಬಂದಾಗ ದ್ವಿಚಕ್ರ ವಾಹನ ಸವಾರರು ರಸ್ತೆಯ ಬದಿಗೆ ಸರಿಯಲು ಸ್ಥಳಾವಕಾಶದ ಕೊರತೆ



ಎದುರಾಗುತ್ತಿದೆ. ಅಲ್ಲದೆ, ಗಿಡಗಂಟಿಗಳಿಂದಾಗಿ ಎದುರಿನಿಂದ ಬರುವ ವಾಹನಗಳು ಸರಿಯಾಗಿ ಗೋಚರಿಸದೆ ಚಾಲಕರು ತೊಂದರೆ ಅನುಭವಿಸುವಂತಾಗಿದೆ. ಇದರಿಂದ ಯಾವುದೇ ಸಮಯದಲ್ಲಿ ಅಪಘಾತ ಸಂಭವಿಸುವ ಆತಂಕ ವಾಹನ ಸವಾರರಲ್ಲಿ ಮನೆಮಾಡಿದೆ.

ಪ್ರಮುಖ ಸಂಪರ್ಕ ರಸ್ತೆಯಾಗಿದ್ದರೂ ರಸ್ತೆ ಬದಿಯಲ್ಲಿರುವ ಮುಳ್ಳು ಕಂಟಿಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮುಂದಾಗದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ. ಅಪಘಾತ ಸಂಭವಿಸಿದ ನಂತರ ಎಚ್ಚೆತ್ತುಕೊಳ್ಳುವ ಬದಲು ಮುನ್ನೆಚ್ಚರಿಕೆ ಕ್ರಮವಾಗಿ ಕೂಡಲೇ ರಸ್ತೆ ಬದಿಯಲ್ಲಿರುವ ಮುಳ್ಳು ಕಂಟಿ ಹಾಗೂ ಗಿಡಗಂಟಿಗಳನ್ನು ತೆರವುಗೊಳಿಸಬೇಕು ಎಂಬುದು ವಾಹನ ಸವಾರರ ಆಗ್ರಹಿಸಿದ್ದಾರೆ.

ಈ ಕುರಿತು ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಗಮನಹರಿಸಿ, ಶೆಳ್ಳಗಿ ಗ್ರಾಮದಿಂದ ಕರಿಭಾವಿ, ಅಗತೀರ್ಥ ಮಾರ್ಗವಾಗಿ ಹುಣಸಗಿ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಎರಡೂ ಬದಿಗಳಲ್ಲಿರುವ ಮುಳ್ಳು ಕಂಟಿಗಳನ್ನು ತೆರವುಗೊಳಿಸಿ, ಬಸ್ ಸೇರಿದಂತೆ ಎಲ್ಲ ವಾಹನಗಳ ಸುಗಮ ಹಾಗೂ ಸುರಕ್ಷಿತ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಈ ರಸ್ತೆಗೆ ಹೊಂದಿಕೊಂಡು ಬರುವ ಗ್ರಾಮಗಳ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಬಿಜೆಪಿ ಮುಖಂಡ ಬಸವರಾಜ ಹೂಗಾರ ನಿರ್ದೋಷಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: 2021ರಲ್ಲಿ ವಿಜಯಪುರದ ಕಾಂಗ್ರೆಸ್ ಕಚೇರಿಗೆ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರ ಭಾವಚಿತ್ರದ ಸ್ಟಿಕ್ಕರ್ ಅಂಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಯುವ ಮುಖಂಡ ಹಾಗೂ ಆಲಮೇಲದ ಬಸವರಾಜ ಹೂಗಾರ ಅವರನ್ನು ವಿಜಯಪುರದ ಮೂರನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯವು ನಿರ್ದೋಷಿಯೆಂದು ಘೋಷಿಸಿ ಬಿಡುಗಡೆಗೊಳಿಸಿದೆ.

ವೀರ ಸಾವರ್ಕರ್ ಅವರ ಭಾವಚಿತ್ರ ಅಂಟಿಸುವ ಮೂಲಕ ಸಾರ್ವಜನಿಕರಲ್ಲಿ ದ್ವೇಷ, ವೈಷಮ್ಯ ಉಂಟುಮಾಡಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಪ್ರಯತ್ನಿಸಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಪದಾಧಿಕಾರಿಯೊಬ್ಬರು ದೂರು ದಾಖಲಿಸಿದ್ದರು. ಈ ಸಂಬಂಧ ಭಾರತೀಯ ದಂಡ ಸಂಹಿತೆಯ ಕಲಂ 447 ಮತ್ತು 505(1)(ಭ) ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ವಿಜಯಪುರದ ಮೂರನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹೇಶ್ ಚಂದ್ರಕಾಂತ್ ಅವರು ದಿನಾಂಕ 02-11-2026ರಂದು ಸಿಆರ್‌ಪಿಸಿ ಕಲಂ 248(1)ರ ಅಡಿಯಲ್ಲಿ ಆರೋಪಗಳಿಂದ ಬಸವರಾಜ ಹೂಗಾರ ಅವರನ್ನು ಖುಲಾಸೆಗೊಳಿಸಿ

ವೀರ ಸಾವರ್ಕರ್ ಭಾವಚಿತ್ರ ಅಂಟಿಸಿದ ಪ್ರಕರಣ । ವಿಜಯಪುರ ನ್ಯಾಯಾಲಯದಿಂದ ಬಿಡುಗಡೆ

ಆದೇಶ ಹೊರಡಿಸಿದ್ದಾರೆ. ಅಲ್ಲದೆ, ಅವರ ಜಾಮೀನು ಬಾಂಡ್‌ಗಳನ್ನು ರದ್ದುಗೊಳಿಸುವಂತೆಯೂ ಆದೇಶಿಸಿದ್ದಾರೆ.

ಈ ಪ್ರಕರಣದಲ್ಲಿ ಬಸವರಾಜ ಹೂಗಾರ ಅವರ ಪರವಾಗಿ ಹಿರಿಯ ನ್ಯಾಯವಾದಿ ತುಳಸಿರಾಮ್ ಸೂರ್ಯವಂಶಿ ಅವರು ವಾದ ಮಂಡಿಸಿದ್ದರು.

ಚಿತ್ರಕಲಾ ಪ್ರಶಸ್ತಿಗೆ ಬೀದರ್‌ನ ಸಂದೀಪ್ ಸಜ್ಜನ್ ಶೆಟ್ಟಿ ಆಯ್ಕೆ

ಬೀದರ್: ಚಿತ್ರಕಲಾ ಕ್ಷೇತ್ರದಲ್ಲಿ ತಮ್ಮದೇ ಆದ ಕಲಾ ಅಭಿವ್ಯಕ್ತಿ ಹಾಗೂ ನಿರಂತರ ಸಾಧನೆಯ ಮೂಲಕ ಗುರುತಿಸಿಕೊಂಡಿರುವ ಬೀದರ್‌ನ ಕಲಾವಿದ ಸಂದೀಪ್ ಸಜ್ಜನ್ ಶೆಟ್ಟಿ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಯ 2025ನೇ ಸಾಲಿನ 53ನೇ ವಾರ್ಷಿಕ ಚಿತ್ರಕಲಾ ಪ್ರಶಸ್ತಿಗೆ ಭಾಜನರಾಗಿದ್ದಾರೆ.

2026ರ ಅಕ್ಟೋಬರ್ 30ರಂದು ಗದಗದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗದಗದ ತೋಂಟದಾರ್ಯ ಸಂಸ್ಥಾನದ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಂದೀಪ್ ಸಜ್ಜನ್ ಶೆಟ್ಟಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.



ಚಿತ್ರಕಲಾ ಕ್ಷೇತ್ರದಲ್ಲಿ ತಮ್ಮ ವಿಶಿಷ್ಟ ಕಲಾ ಶೈಲಿ, ಸೃಜನಶೀಲತೆ ಹಾಗೂ ನಿರಂತರ ಪರಿಶ್ರಮದಿಂದ ಸಾಧನೆ ಮಾಡಿರುವ ಸಂದೀಪ್ ಅವರ ಆಯ್ಕೆಯು ಬೀದರ್ ಜಿಲ್ಲೆಯ ಕಲಾ ಕ್ಷೇತ್ರಕ್ಕೆ ಹೆಮ್ಮೆಯ ಸಂಗತಿಯಾಗಿದೆ. ಅವರ ಈ ಸಾಧನೆಗೆ ಜಿಲ್ಲೆಯ ಕಲಾವಿದರು, ಕಲಾಭಿಮಾನಿಗಳು, ಗಣ್ಯರು ಹಾಗೂ ಸ್ನೇಹಿತರು ಅಭಿನಂದನೆ ಸಲ್ಲಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಕಲಾ ಸಾಧನೆಗಳನ್ನು ಮಾಡುವಂತಾಗಲಿ ಎಂದು ಶುಭ ಹಾರೈಸಿದ್ದಾರೆ.

ಬಸವಣ್ಣ ಮಾಡಿದ್ದು ಲೋಕ ಕಲ್ಯಾಣದಕ್ರಾಂತಿ



ಬೀದರ:ಪ್ರಪಂಚದಇತಿಹಾಸದಲ್ಲಿ ಅನೇಕ ಕ್ರಾಂತಿಗಳಾಗಿವೆ. ಆದರೆ, ಬಸವಣ್ಣ ಮಾಡಿದ್ದು ಲೋಕ ಕಲ್ಯಾಣದಕ್ರಾಂತಿ.ಇದುಇಡೀ ಮನುಕುಲದಉದ್ಧಾರವಾಗಿದೆ. ಶರಣರು ಅನೇಕ ಹೋರಾಟಗಳನ್ನು ಮಾಡಿಕಾಯಕವೇಕೈಲಾಸವೆಂದುಎಲ್ಲಾ ವೃತ್ತಿಗೆ ಸಮಾನಗೌರವಕೊಟ್ಟು ಸತ್ಯ ಶುದ್ಧಕಾಯಕಕ್ಕೆ ಹೊಸ ಕಲ್ಪನೆ ನೀಡಿರುವುದರಿಂದಲೇಕಲ್ಯಾಣ ಪಟ್ಟಣದಲ್ಲಿಅಂದುಕೊಡುವವರುಂಟು ಬೇಡುವವರಿಲ್ಲ, ಬೇಡುವವರಿಲ್ಲದಕಾರಣ ನಾನು ಬಡವನಾದೆ ಎಂಬ ಬಸವಣ್ಣನವರಕಾಯಕ ಸಿದ್ಧಾಂತ ಇಂದಿಗೂ ಪ್ರಸ್ತುತಎಂದು ಬೀದರಜಿಲ್ಲಾಉಸ್ತುವಾರಿ ಸಚಿವರಾದಈಶ್ವರಖಂಡ್ರೆ ನುಡಿದರು. ಜಿಲ್ಲೆಯ ಸಿದ್ದೇಶ್ವರ ಗ್ರಾಮದಲ್ಲಿ ನಿನ್ನೆ ನಡೆದಅಶ್ವಾರೂಢ ವಿಶ್ವಗುರು ಬಸವಣ್ಣನವರ ಮೂರ್ತಿಉದ್ಘಾಟನೆ ಹಾಗೂ ಗ್ರಾಮದ ಮಹಾದ್ವಾರ ಉದ್ಘಾಟಿಸಿದ ಕರ್ನಾಟಕರಾಜ್ಯದಗ್ರಾಮೀಣಅಭಿವೃದ್ಧಿ ಮತ್ತು ಪಂಚಾಯರಾಜ್ ಸಚಿವರಾದ ಶ್ರೀ ಈಶ್ವರಖಂಡ್ರೆ ಮಾತನಾಡುತ್ತಗ್ರಾಮದಲ್ಲಿಇಂದುಐತಿಹಾಸಿಕ ವೈಚಾರಿಕಕಾರ್ಯ ನಡೆದಿದೆ. ಯುವಜನಾಂಗ ದುಶ್ಚಟಗಳಿಗೆ ಬಲಿಯಾಗಿಜೀವನ ಹಾಳಾಗುತ್ತಿದೆ. ನೈತಿಕ ಮೌಲ್ಯ ಕುಸಿದಿದೆ,ಒಡೆದಾಡುವ ನೀತಿಯಿಂದ ಸಮಾಜದಲ್ಲಿಆತಂಕ ಹೆಚ್ಚಾಗುತ್ತಿದೆ.ಇಂಥಕಾಲ ಘಟ್ಟದಲ್ಲಿ ಬಸವಣ್ಣನವರತತ್ವದಿಂದ ಶಾಂತಿ ನೆಮ್ಮದಿ ಒಡಮೂಡಲು ಸಾಧ್ಯ.ಇದರಿಂದಯುವಜನಾಂಗದಲ್ಲಿ ಪರಿವರ್ತನೆಯಾಗಿ ಸಮಾಜ ಸುಧಾರಣೆ ಸಾಧ್ಯ.ವಚನ ಸಾಹಿತ್ಯಓದಿದರೆ ಮಹಾನ್ ಶಕ್ತಿಬರುವುದರಲ್ಲಿ ಸಂದೇಹವಿಲ. ಯುವ ಶಕ್ತಿ ಅಣು ಶಕ್ತಿಗಿಂತ ಮಿಗಿಲು. ಯುವಕರು ನಿರಂತರವಾಗಿಧನಾತ್ಮಕಚಿಂತನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಬಸವಣ್ಣ ಮಹಿಳೆಯರಿಗಾಗಿ ಮನೆ ಬಿಟ್ಟ, ಹನ್ನೆರಡನೆ ಶತಮಾನದಲ್ಲಿ 33 ವಚನಕಾರ್ತಿಯರು ವಚನಗಳನ್ನು ರಚಿಸಿರುವುದು ದಾಖಲೆ. ಮಹಿಳೆಯರು ಯಾವತ್ತು ಬಸವಣ್ಣನವರನ್ನು ಮರೆಯಬಾರದು. 770 ಅಮರಗಣಂಗಳವರು ಒಂದೆಡೆ ಸೇರಿಅನುಭವ ಮಂಟಪದಲ್ಲಿ ಮುಕ್ತವಾಗಿ ಚರ್ಚೆಮಾಡಿರವುದೆ ಇಂದಿನ ಪಾರ್ಲಿಮೆಂಟ. ಬಸವಕಲ್ಯಾಣದಲ್ಲಿ ನೂತನಅನುಭವ ಮಂಟಪದಕಾರ್ಯಅತ್ಯಂತಭರದಿಂದಸಾಗುತ್ತಿದೆ.ಇಲ್ಲಿಎಲಾ ತರಹದ ಇತ್ತಿಚಿನ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತಿದೆ. ರೊಬೆಟಿ ತಂತ್ರಜ್ಞಾನ ಹಾಗೂ ವೈಜ್ಞಾನಿಕವಾಗಿ ಇಷ್ಟಲಿಂಗ ಪೂಜೆಯಕಲ್ಪನೆ ಪ್ರಾತ್ಯಕ್ಷಿಕೆಯಿಂದತೋರಿಸಲಾಗುವುದು. ವ್ಯಕ್ತಿಯ ನಾಡಿ ಮಿಡಿತ. ಹೃದಯ ಮಿಡಿತ ಶಾರೀರಿಕ ಬದಲಾವಣೆ ಬಗ್ಗೆ ಯಂತ್ರದಿಂದ ಪರೀಕ್ಷೆಗೆ ಒಳಪಡಿಸಿ ತದನಂತರ ಇಷ್ಟಲಿಂಗ ಪೂಜೆಜೀವನದಲ್ಲಿ ಅಳವಡಿಸಿಕೊಂಡ ಮೇಲೆ ದೇಹದಲ್ಲಿ ಆಗುವ ಪರಿಣಾಮ ನೋಡುವ ಭಾಗ್ಯ ಪ್ರವಾಸಿಗರ ಗಮನಕ್ಕೆ ತರುವ ದಿಶೆಯಲ್ಲಿನಾವಿಂದುಕಾಯೋನ್ಮುಖರಾಗಿದ್ದೇವೆಂದು ನುಡಿದರು.

ಗ್ರಾಮದ ಮೂಲಭೂತ ಸೌಕರ್ಯಕ್ಕಾಗಿ ನಾನು ಸದಾ ಸಿದ್ದ.ತಮ್ಮ ಸಂಪೂರ್ಣ ಮನವಿ ಪತ್ರಕ್ಕೆ ಸ್ಪಂದಿಸಿ ಸಂಬಂಧಪಟ್ಟಇಲಾಖೆಯ ಅಧಿಕಾರಿಗಳ ಜೊತೆಗೆ ಚರ್ಚಿಸಿ ಅವರಿಗೆ ನಿರ್ದೇಶನ ನೀಡುವೆಎಂದರು.ಅನೇಕ ದಿವಸಗಳಿಂದ ಬೀದರನಲ್ಲಿ ಬಸವಭವನ ಆಗಬೇಕೆಂಬ ಒತ್ತಾಯ ಬರುತ್ತಿದೆ.ನಿವೇಶನದಅಧಿಕೃತದಾಖಲಾತಿ ನೀಡಿದರೆಅನುದಾನ ನೀಡಲು ನಾನು ಬದ್ದನಾಗಿದ್ದೇನೆಂದು ಹೇಳಿದರು.ಈಗಾಗಲೆ ಬೀದರ ನಗರದಲ್ಲಿಒಂದು ಖಾಸಗಿ ಸ್ಥಳ ಪರಿಶೀಲನೆ ಮಾಡಿದ್ದು ಲಿಂಗಾಯತ ಸಮಾಜದ ಬಡಹೆಣ್ಣುಮಕ್ಕಳಿಗಾಗಿ ಹಾಸ್ಟೇಲ್ ಸದ್ಯದಲ್ಲೆ ಪ್ರಾರಂಭಿಸಲಾಗುವದೆಂದು ನುಡಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿದ ಬಸವಧರ್ಮಪೀಠಾಧ್ಯಕ್ಷರಾದ ಮಹಾಜಗದ್ಗುರುಡಾ. ಗಂಗಾದೇವಿ ಮಾತಾಜಿ ಮಾತನಾಡುತ್ತ ನಗರದ ಅನೇಕ ಜನ ಹಳ್ಳಿ ಕಡೆಗೆ ಹೋಗದೆಇರುವಇಂಥ ಸಂಧರ್ಭದಲ್ಲಿಶಾಂತಾಜೈರಾಜಖಂಡ್ರೆ ದಂಪತಿಗಳು ತಮ್ಮೂರಿನ ಬಗ್ಗೆ ಇದ್ದ ಕಾಳಜಿಯ ಪ್ರತೀಕ ಇಂದಿನ ಕಾರ್ಯಕ್ರಮದ ವೈಶಿಷ್ಟ್ಯ.ತಮ್ಮತನು ಮನ ಧನದಿಂದ ಸಮಾಜದಕಾರ್ಯಜೊತೆಗೆಹಳ್ಳಿಗಳಉದ್ಧಾರದದೂರದೃಷ್ಟಿಗೆ ಶುಭಕೋರಿದರು.

ನೇತೃತ್ವ ವಹಿಸಿದ ಅನುಭವ ಮಂಟಪದಅಧ್ಯಕ್ಷರಾದ ಪೂಜ್ಯ ಶ್ರೀ ನಾಡೋಜಡಾ, ಬಸವಲಿಂಗ ಪಟ್ಟದ್ದೇವರು ಆಶೀರ್ವಚನ ನೀಡಿಇಂದುಗ್ರಾಮದಲ್ಲಿಹಬ್ಬದ ವಾತಾವರಣ ನೋಡಿ ಸಂತಸವಾಗಿದೆ.ಖಂಡ್ರೆ ದಂಪತಿಗಳ ಕಾರ್ಯ ಶ್ಲಾಘನೀಯಎಂದರು. ಪೂಜ್ಯ ಶ್ರೀ ಡಾ.ಶಿವಾನಂದ ಮಹಾಸ್ವಾಮಿಗಳು ಹುಲಸೂರ, ಪೂಜ್ಯ ಶ್ರೀ ಡಾ.ಸಿದ್ರಾಮ ಶರಣರು ಬೆಲ್ದಾಳ ಸಹ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಮೊದಲಿಗೆ ಪ್ರಾಸ್ತಾವಿಕವಾಗಿ ಬಾಬು ವಾಲಿ ಮಾತನಾಡಿದರು.ಮುಖ್ಯ ಅತಿಥಿಗಳಾಗಿ ಆಗಮಿಸಿದ ಬಸವರಾಜಧನ್ನೂರ ಮಾತನಾಡಿ ಈ ಗ್ರಾಮಕ್ಕೆ ಸಿದ್ಧರಾಮ ಶಿವಯೋಗಿ ಬಂದು ಹೋಗಿರುವ ಪರಂಪರೆ ಹಿನ್ನಲೆಯಲ್ಲಿ ಪವಿತ್ರಗ್ರಾಮವಾಗಿದೆಎಂದರು. ವೇದಿಕೆ ಮೇಲೆ ಸೋಮಶೇಖರ ಪಾಟೀಲ ಗಾದಗಿ, ಗುರುನಾಥ ಕೊಳ್ಳುರ,ಬಸವರಾಜ ಬುಳ್ಳಾ, ಡಿ.ಕೆ. ಸಿದ್ರಾಮ, ಸೋಮಶೇಖರಚಿದ್ರಿ, ದಿಲೀಪಕುಮಾರ ತಾಳಂಪಳ್ಳಿ, ಸುರೇಶಚನ್ನಶೆಟ್ಟಿ, ಶಿವರಾಜ ಹಾಸನಕರ,ಅಶೋಕ ಸೂಂಜಿ, ಸೋಮನಾಥಅಷ್ಟುರೆ, ಕೆ ಎಸ್ ಬಂದು, ಶಂಕರೆಪ್ಪ ಪಾಟೀಲ ಜಹೀರಾಬಾದ, ಶಶಿಧರ ಹೊಸಳ್ಳಿ,ಪ್ರಕಾಶ ಟೊಣ್ಣೆ, ವಿಜಯಕುಮಾರ ಪಾಟೀಲ, ಸಂತೊಷ ಪಾಟೀಲ, ಅನೀಲ ಪಾಟೀಲ, ಬಾಬುರಾವದಾನಿ, ಕಪಲಾಪೂರೆ ಶಿವರಾಜ ಹಾಜರಿದ್ದರು.

ಮೊದಲಿಗೆ ವಚನ ವರ್ಷಿಣಿತಂಡದಿಂದಒಂದು ಗಂಟೆಗಳ ಕಾಲ ಲಿಂಗಾರತಿ ನಾವದಗೇರೆಅಧ್ಯಕ್ಷತೆಯಲ್ಲಿ ಹಾಗೂ ವೈಜಿನಾಥ ಸಜ್ಜನಶೆಟ್ಟಿ ಮಾರ್ಗದರ್ಶನದಲ್ಲಿ ಸುಮಧುರಕಂಠದಿಂದ ವಚನ ಗಾಯನ ನಡೆಸಿಕೊಟ್ಟರು. ಅಶ್ವಾರೂಢ ವಿಶ್ವಗುರು ಬಸವಣ್ಣನವರ ಮೂರ್ತಿ ಹಾಗೂ ಮಹಾದ್ವಾರದ ದಾಸೋಹಿಗಳಾದ ಶಾಂತಾಜೈರಾಜಖಂಡ್ರೆ ದಂಪತಿಗಳಿಗೆ ವೇದಿಕೆ ಮೇಲೆ ಸನ್ಮಾನಿಸಿದರು. ಸರ್ವರನ್ನು ಉದ್ಯಮಿಗಳಾದ ಜೈರಾಜಖಂಡ್ರೆ ಸ್ವಾಗತಿಸಿ ಎಲ್ಲರನ್ನು ಸನ್ಮಾನಿಸಿದರು.ಕಾರ್ಯಕ್ರಮದ ನಿರೂಪಣೆಯನ್ನು ಸುರೇಶ ಸ್ವಾಮಿ ಮಾಡಿದರೆ ವಂದನಾರ್ಪಣೆಯನ್ನು ನಿಖಿಖಂಡ್ರೆ ಮಾಡಿದರು.

ನಿಮ್ಮ ಲೈಫ್, ನಿಮ್ಮದೇ ರೂಲ್ಸ್!

■ ಉದಯರಶ್ಮಿ ದಿನಪತ್ರಿಕೆ

ಬದುಕಿನ ಹಾದಿಯು ಎಂದಿಗೂ ಸರಳವಾಗಿರುವುದಿಲ್ಲ, ಆದರೆ ನಿಮ್ಮಲ್ಲಿರುವ ಅಚಲವಾದ ನಂಬಿಕೆ ಮತ್ತು ಸಕಾರಾತ್ಮಕ ದೃಷ್ಟಿಕೋನವು ಕತ್ತಲೆಯಲ್ಲೂ ಬೆಳಕಿನ ಕಿರಣವನ್ನು ತೋರಿಸಬಲ್ಲದು. ಸೋಲು ಎಂಬುದು ಬದುಕಿನ ಅಂತ್ಯವಲ್ಲ, ಬದಲಿಗೆ ಅದು ಹೊಸ ಆರಂಭದ ಮುನ್ನುಡಿಯಾಗಿದೆ. ನೀವು ಎದುರಿಸುವ ಪ್ರತಿಯೊಂದು ಕಷ್ಟವೂ ನಿಮ್ಮನ್ನು ಮತ್ತಷ್ಟು ಗಟ್ಟಿಗೊಳಿಸಲು ಬರುವ ತರಬೇತಿಯಾಗಿದೆ.




ಜಯಶ್ರೀ.ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ ಮೊ:9449234142

ಇಂದಿನ ಡಿಜಿಟಲ್ ಪ್ರಪಂಚದ ಭೀಕರ ಸ್ಪರ್ಧೆ, ಸೋಶಿಯಲ್ ಮೀಡಿಯಾದ ಫಿಲ್ಟರ್ಡ್ ಲೈಫ್ ಮತ್ತು ಸದಾ ಕಾಡುವ 'ಫೋಮೋ' (FOMO – ಫಿಯರ್ ಆಫ್ ಮಿಸ್ಸಿಂಗ್ ಔಟ್) ಮಧ್ಯೆ ನಮ್ಮ ಅಸಲಿ ಆಂತರಿಕ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದೇವಾ? ಸದಾ ಇತರರ

ಲೈಫ್‌ಸ್ಟೈಲ್ ನೋಡಿ ನಮ್ಮನ್ನು ನಾವು ಜಡ್ಜ್ ಮಾಡಿಕೊಳ್ಳುವ ಬದಲು, ನಮ್ಮದೇ ಆದ ವಿಶಿಷ್ಟ ಸಾಮರ್ಥ್ಯವನ್ನು ಗುರುತಿಸಿ, ನಮ್ಮ ಮೆದುಳಿನ ಸಾಮರ್ಥ್ಯವನ್ನು ರೀಬೂಟ್ ಮಾಡಿಕೊಳ್ಳುವುದೇ ಇಂದಿನ ಜನರೇಷನ್‌ಗೆ ಬೇಕಾಗಿರುವ ಅಸಲಿ ಮಂತ್ರ. ಬದುಕಿನ ಏರಿಳಿತಗಳಲ್ಲಿ ಎದುರಾಗುವ ಸಣ್ಣಪುಟ್ಟ ಸೋಲುಗಳಿಗೆ ಎದೆಗುಂದದೆ, ಆತ್ಮವಿಶ್ವಾಸದ ಕಿಡಿಯನ್ನು ಮನಸ್ಸಿನಲ್ಲಿ ಸದಾ ಆಕ್ಟಿವ್ ಆಗಿ ಇಟ್ಟುಕೊಳ್ಳುವುದೇ ನಿಮ್ಮನ್ನು ಕ್ರೌಡ್‌ನಿಂದ ಸಪರೇಟ್ ಆಗಿ ನಿಲ್ಲಿಸುವ ನಿಜವಾದ ರಹಸ್ಯ.

ರಷ್ಯನ್ ಸಾಹಿತ್ಯದ ಒಂದು ಸುಂದರವಾದ ಸಣ್ಣ ಕಥೆ ಈ ಸಂದರ್ಭಕ್ಕೆ ಸೂಕ್ತವಾಗಿ ಹೊಂದಿಕೆಯಾಗುತ್ತದೆ. ಒಬ್ಬ ಶ್ರೀಮಂತ ವರ್ತಕನು ಇಡೀ ಜಗತ್ತಿನ ಸುಖ-ಭೋಗಗಳನ್ನು ತನ್ನದಾಗಿಸಿಕೊಳ್ಳಲು ಸದಾ ಆಸೆಪಡುತ್ತಿದ್ದನು. ಆದರೆ ಅವನ ಮನಸ್ಸಿನಲ್ಲಿ ಎಂದಿಗೂ ಶಾಂತಿ ಇರಲಿಲ್ಲ. ಒಂದು ದಿನ ಅವನು ಕಾಡಿನಲ್ಲಿದ್ದ ಒಬ್ಬ ವೃದ್ಧ ಸನ್ಯಾಸಿಯನ್ನು ಭೇಟಿಯಾಗಿ, "ನನಗೆ ಜಗತ್ತಿನ ಎಲ್ಲವೂ ಸಿಕ್ಕರೂ ನೆಮ್ಮದಿ ಏಕೆ ಸಿಗುತ್ತಿಲ್ಲ?" ಎಂದು ಕೇಳಿದನು. ಅದಕ್ಕೆ ಆ ಸನ್ಯಾಸಿಯು ಅವನ ಕೈಗೆ ಒಂದು ಖಾಲಿ ಮಣ್ಣಿನ ಹಣತೆಯನ್ನು ಕೊಟ್ಟು, ಅದಕ್ಕೆ ತೈಲವನ್ನು ತುಂಬಿಸಲು ಹೇಳಿದನು. ವರ್ತಕನು ತೈಲವನ್ನು ತುಂಬಿಸುತ್ತಾ ಹೋದಂತೆ, ಹಣತೆಯ ತಳಭಾಗದಲ್ಲಿದ್ದ ಸಣ್ಣ ರಂಧ್ರದ ಮೂಲಕ ತೈಲವೆಲ್ಲವೂ ಸೋರಿ ಹೋಗುತ್ತಿತ್ತು. ಆಗ ವೃದ್ಧನು ನಗುತ್ತಾ, "ನಿನ್ನ ಅತಿಯಾದ ಆಸೆಗಳು ಈ ಸೋರುವ ಹಣತೆಯಿದ್ದಂತೆ; ಎಷ್ಟು ತುಂಬಿದರೂ ಅದು ಅಪೂರ್ಣವಾಗಿಯೇ ಇರುತ್ತದೆ. ನಿಜವಾದ ಸಂತೋಷವು ಹೊರಗಿನ ವಸ್ತುಗಳ ಸಂಗ್ರಹದಲ್ಲಿಲ್ಲ, ಒಳಗಿನ ತೃಪ್ತಿಯಲ್ಲಿದೆ" ಎಂದು ವಿವರಿಸಿದನು. ಈ ಕಥೆಯು ನಮಗೆ ಭೌತಿಕ ಲೋಕದ ಅತಿಯಾದ ವ್ಯಾಮೋಹವನ್ನು ಬಿಟ್ಟು, ನಮ್ಮ ನೈತಿಕ ಮತ್ತು ಬೌದ್ಧಿಕ ಗುಣಗಳನ್ನು ಬೆಳೆಸಿಕೊಳ್ಳುವುದರ ಮಹತ್ವವನ್ನು ತಿಳಿಸಿಕೊಡುತ್ತದೆ.

ಬದುಕಿನ ಹಾದಿಯಲ್ಲಿ ಸಾಗುವಾಗ ನಮಗೆ ಅಮೆರಿಕದ ಪ್ರಸಿದ್ಧ ಲೇಖಕ ಮಾರ್ಕ್ ಟ್ವೈನ್ ಅವರ ಮಾತು ನೆನಪಾಗುತ್ತದೆ: "ನಿಮ್ಮನ್ನು ಕುಗ್ಗಿಸಲು ಯತ್ನಿಸುವ ಜನರಿಂದ ಸದಾ ದೂರವಿರಿ; ಸಣ್ಣ ಮನಸ್ಸಿನವರು ಮಾತ್ರ ಹಾಗೆ ಮಾಡುತ್ತಾರೆ, ಆದರೆ ನಿಜವಾದ ಮಹಾನ್ ವ್ಯಕ್ತಿಗಳು ನೀವು ಸಹ ಶ್ರೇಷ್ಠರಾಗಬಹುದು ಎಂಬ ಭಾವನೆಯನ್ನು ಮೂಡಿಸುತ್ತಾರೆ." ಇದು ನಮ್ಮ ಸುತ್ತಮುತ್ತಲಿನ ಪರಿಸರ ಎಷ್ಟು ಮುಖ್ಯ



ಎಂಬುದನ್ನು ತೋರಿಸುತ್ತದೆ. ಇದರ ಜೊತೆಗೆ ಇಂಗ್ಲಿಷ್‌ನಲ್ಲಿ ಒಂದು ವಿಶಿಷ್ಟವಾದ ಜನಪ್ರಿಯ ಗಾದೆಯಿದೆ: "ನೆರಳಿನಲ್ಲಿ ಕುಳಿತುಕೊಳ್ಳಲು ಬಯಸುವವನು ಮೊದಲು ಸಸಿಯನ್ನು ನೆಡಬೇಕು." ಅಂದರೆ ನಮ್ಮ ಇಂದಿನ ಕಠಿಣ ಪರಿಶ್ರಮವೇ ನಾಳಿನ ಸುಂದರ ಭವಿಷ್ಯಕ್ಕೆ ಅಡಿಪಾಯ. ಇತಿಹಾಸದ ಶ್ರೇಷ್ಠ ಆವಿಷ್ಕಾರಕ ಥಾಮಸ್ ಆಲ್ವಾ ಎಡಿಸನ್ ಅವರು ಹೇಳಿದಂತೆ, "ನಮ್ಮ ಬಹುದೊಡ್ಡ ದೌರ್ಬಲ್ಯವೆಂದರೆ ಅರ್ಧಕ್ಕೇ ಕೈಬಿಡುವುದು. ಯಶಸ್ವಿಯಾಗಲು ಇರುವ ಅತ್ಯಂತ ಖಚಿತವಾದ ಮಾರ್ಗವೆಂದರೆ ಸದಾ ಇನ್ನೊಮ್ಮೆ ಪ್ರಯತ್ನಿಸುವುದು." ಈ ನಿರಂತರ



ಪ್ರಯತ್ನದ ಹಾದಿಯಲ್ಲಿ ನಾವು ಮುನ್ನಡೆಯುವಾಗ "ಒರಟು ರಸ್ತೆಗಳೇ ನಮಗೆ ನಕ್ಷತ್ರಗಳತ್ತ ಸಾಗುವ ದಾರಿಯನ್ನು ತೋರಿಸುತ್ತವೆ" ಎಂಬ ನಾಣ್ಣುಡಿಯನ್ನು ಮರೆಯಬಾರದು.

ಪ್ರತಿಯೊಬ್ಬ ಸಾಧಕನೂ ತನ್ನದೇ ಆದ ವಿಶಿಷ್ಟ ದಾರಿಯನ್ನು ಕಂಡುಕೊಳ್ಳುತ್ತಾನೆ. ಆಲ್ಬರ್ಟ್ ಐನ್‌ಸ್ಟೈನ್ ಅವರು ಹೇಳಿದಂತೆ, "ನಿನ್ನೆ ದಿನದಿಂದ ಕಲಿಯಿರಿ, ಇಂದಿನ ದಿನದಲ್ಲಿ ಬದುಕಿ, ನಾಳೆಯ ದಿನದ ಬಗ್ಗೆ ಆಶಾವಾದಿಗಳಾಗಿರಿ." ಈ ಆಶಾವಾದವೇ ನಮ್ಮನ್ನು ಮುನ್ನಡೆಸುವ ಶಕ್ತಿ. ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ, ಆದ್ದರಿಂದಲೇ "ಬೆಳ್ಳಿಯ ತಟ್ಟೆಯೂ ಸಣ್ಣ ಕಲೆಯನ್ನು ಹೊಂದಿರಬಹುದು" ಎಂಬ ಆಂಗ್ಲ ಗಾದೆಯು ನಮ್ಮ ತಪ್ಪುಗಳನ್ನು ಒಪ್ಪಿಕೊಂಡು ತಿದ್ದಿಕೊಳ್ಳಲು ಪ್ರೇರೇಪಿಸುತ್ತದೆ. ಹೆನ್ರಿ ಫೋರ್ಡ್ ಅವರ ಮಾತು ನಮಗೆ ಸದಾ ದಾರಿದೀಪ: "ನೀನು ಸಾಧಿಸಬಲ್ಲೆ ಎಂದು ನಂಬಿದರೂ ಅಥವಾ ಸಾಧಿಸಲಾರೆ ಎಂದು ಭಾವಿಸಿದರೂ, ಎರಡೂ ನಂಬಿಕೆಗಳಲ್ಲೂ ನೀನು ಸರಿಯಾಗಿಯೇ ಇರುತ್ತೀಯಾ." ಅಂದರೆ ನಮ್ಮ ಯಶಸ್ಸು ಸಂಪೂರ್ಣವಾಗಿ ನಮ್ಮ ಆಲೋಚನಾ ಶೈಲಿಯನ್ನೇ ಅವಲಂಬಿಸಿದೆ.


ಉನ್ನತ ಬದುಕಿನ ಶಿಲ್ಪಕ್ಕೆ ಅಗತ್ಯವಿರುವ ಆಂತರಿಕ ಪರಿವರ್ತನೆಯ ಸೂತ್ರಗಳು ಇಲ್ಲಿವೆ


ಆತ್ಮಾವಲೋಕನ ಮತ್ತು ನಿರಂತರ ಕಲಿಕೆ

ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿದಿನ ಕನಿಷ್ಠ ಹತ್ತು ನಿಮಿಷಗಳ ಕಾಲ ತನ್ನ ಆಲೋಚನೆಗಳು ಮತ್ತು ನಡವಳಿಕೆಗಳ ಬಗ್ಗೆ ಆಳವಾಗಿ ಯೋಚಿಸಬೇಕು. ನಾವು ಮಾಡುವ ತಪ್ಪುಗಳಿಂದ ಕಲಿಯುವುದು ಪ್ರಗತಿಯ ಮೊದಲ ಹೆಜ್ಜೆಯಾಗಿದೆ. ಹೊಸ ಕೌಶಲಗಳನ್ನು ಕಲಿಯಲು ವಯಸ್ಸಿನ ಮಿತಿ ಇರುವುದಿಲ್ಲ. ಜ್ಞಾನದ ಹಸಿವು ನಮ್ಮನ್ನು ಸದಾ ಕ್ರಿಯಾಶೀಲವಾಗಿಡುತ್ತದೆ ಮತ್ತು ಸಮಾಜದಲ್ಲಿ ಗೌರವಾನ್ವಿತ ಸ್ಥಾನವನ್ನು ತಂದುಕೊಡುತ್ತದೆ.

ಸಕಾರಾತ್ಮಕ ಆಲೋಚನಾ ಶೈಲಿ

ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ಕೇವಲ ತೊಂದರೆಗಳೆಂದು ಭಾವಿಸದೆ, ಅವುಗಳನ್ನು ನಮ್ಮ ಸಾಮರ್ಥ್ಯವನ್ನು ಪರೀಕ್ಷಿಸುವ ಸುವರ್ಣ ಅವಕಾಶಗಳೆಂದು ಪರಿಗಣಿಸಬೇಕು.





ನಕಾರಾತ್ಮಕ ಆಲೋಚನೆಗಳು ನಮ್ಮ ಮನಸ್ಸಿನ ಶಕ್ತಿಯನ್ನು ಕುಂದಿಸುತ್ತವೆ. ಸದಾ ಒಳ್ಳೆಯದನ್ನೇ ಯೋಚಿಸುವ ಅಭ್ಯಾಸವು ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಸುಂದರಗೊಳಿಸುತ್ತದೆ ಮತ್ತು ಮಾನಸಿಕ ಶಾಂತಿಯನ್ನು ವೃದ್ಧಿಸುತ್ತದೆ.

ಸಮಯದ ಸದ್ಬಳಕೆ ಮತ್ತು ಶಿಸ್ತು

ಕಾಲವು ಅತ್ಯಂತ ಅಮೂಲ್ಯವಾದ ಸಂಪತ್ತು. ಪ್ರತಿಯೊಂದು ಕಾರ್ಯಕ್ಕೂ ನಿಖರವಾದ ಯೋಜನೆಯನ್ನು ರೂಪಿಸಿಕೊಂಡು, ಸಮಯಕ್ಕೆ ಸರಿಯಾಗಿ ಕೆಲಸ ಮುಗಿಸುವ ಶಿಸ್ತನ್ನು ಬೆಳೆಸಿಕೊಳ್ಳಬೇಕು. ಇಂದಿನ ಕೆಲಸವನ್ನು ನಾಳೆಗೆ ಮುಂದೂಡುವ ಅಭ್ಯಾಸವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ನಿಯಮಿತ ಜೀವನಶೈಲಿಯು ನಮ್ಮ ಉತ್ಪಾದಕತೆಯನ್ನು ಹೆಚ್ಚಿಸಿ, ಗುರಿಯನ್ನು ಸುಲಭವಾಗಿ ತಲುಪಲು ಸಹಾಯ ಮಾಡುತ್ತದೆ.

ಸಹಾನುಭೂತಿ ಮತ್ತು ಉತ್ತಮ ಸಂವಹನ

ಇತರರ ಭಾವನೆಗಳನ್ನು ಗೌರವಿಸುವುದು ಮತ್ತು ಅವರ ದೃಷ್ಟಿಕೋನದಿಂದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಉತ್ತಮ ವ್ಯಕ್ತಿತ್ವದ ಲಕ್ಷಣ. ಮಾತು ಆಡುವ ಮುನ್ನ ಯೋಚಿಸಬೇಕು, ನಮ್ಮ ಶಬ್ದಗಳು ಸದಾ ಪ್ರೀತಿ ಮತ್ತು ಗೌರವದಿಂದ ಕೂಡಿರಬೇಕು. ಕಹಿ ಮಾತುಗಳನ್ನು ಆಡುವುದನ್ನು ಬಿಟ್ಟು, ಎಲ್ಲರನ್ನೂ ಒಳಗೊಳ್ಳುವ ಮೃದುವಾದ ಸಂವಹನ ಕಲೆಯು ನಮ್ಮ ಬಾಂಧವ್ಯವನ್ನು ಗಟ್ಟಿಗೊಳಿಸುತ್ತದೆ.

ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಮತೋಲನ

ಸದೃಢವಾದ ದೇಹದಲ್ಲಿ ಮಾತ್ರ ಸದೃಢವಾದ ಮನಸ್ಸು ಇರಲು ಸಾಧ್ಯ. ಪ್ರತಿದಿನ ನಿಯಮಿತ ವ್ಯಾಯಾಮ, ಯೋಗ ಅಥವಾ ಧ್ಯಾನ ಮಾಡುವುದರಿಂದ ಮಾನಸಿಕ ಒತ್ತಡವು ಗಣನೀಯವಾಗಿ ಕಡಿಮೆಯಾಗುತ್ತದೆ. ಪೌಷ್ಟಿಕ ಆಹಾರ ಮತ್ತು ಪೂರಕವಾದ ನಿದ್ರೆ ನಮ್ಮ ಒಟ್ಟಾರೆ ಬೆಳವಣಿಗೆಗೆ ಅಗತ್ಯ. ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಾಗಿದ್ದಾಗ ಮಾತ್ರ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು.

ದೃಢ ನಿರ್ಧಾರ ಮತ್ತು ನಾಯಕತ್ವ ಗುಣ

ಯಾವುದೇ ಕಠಿಣ ಪರಿಸ್ಥಿತಿಯಲ್ಲೂ ಗೊಂದಲಕ್ಕೆ ಒಳಗಾಗದೆ, ವಿವೇಚನೆಯಿಂದ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಸೋಲಿನ ಭಯದಿಂದ ಹಿಂದೆ ಸರಿಯದೆ, ಜವಾಬ್ದಾರಿಯನ್ನು ಹೊತ್ತು ಮುನ್ನಡೆಯುವ ನಾಯಕತ್ವದ ಗುಣವು ನಮ್ಮನ್ನು ಯಶಸ್ಸಿನ ಶಿಖರಕ್ಕೆ ಕೊಂಡೊಯ್ಯುತ್ತದೆ. ನಮ್ಮ ಸಾಮರ್ಥ್ಯದ ಮೇಲೆ ನಮಗಿರುವ ಅಚಲವಾದ ನಂಬಿಕೆಯೇ ನಮ್ಮನ್ನು ಸಮಾಜದಲ್ಲಿ ವಿಶಿಷ್ಟ ನಾಯಕರನ್ನಾಗಿ ರೂಪಿಸುತ್ತದೆ.

ಕೊನೆ ಹನಿ

ಬದುಕಿನ ಹಾದಿಯು ಎಂದಿಗೂ ಸರಳವಾಗಿರುವುದಿಲ್ಲ, ಆದರೆ ನಿಮ್ಮಲ್ಲಿರುವ ಅಚಲವಾದ ನಂಬಿಕೆ ಮತ್ತು ಸಕಾರಾತ್ಮಕ ದೃಷ್ಟಿಕೋನವು ಕತ್ತಲೆಯಲ್ಲೂ ಬೆಳಕಿನ ಕಿರಣವನ್ನು ತೋರಿಸಬಲ್ಲದು. ಸೋಲು ಎಂಬುದು ಬದುಕಿನ ಅಂತ್ಯವಲ್ಲ, ಬದಲಿಗೆ ಅದು ಹೊಸ ಆರಂಭದ ಮುನ್ನುಡಿಯಾಗಿದೆ. ನೀವು ಎದುರಿಸುವ ಪ್ರತಿಯೊಂದು ಕಷ್ಟವೂ ನಿಮ್ಮನ್ನು ಮತ್ತಷ್ಟು ಗಟ್ಟಿಗೊಳಿಸಲು ಬರುವ ತರಬೇತಿಯಾಗಿದೆ. ಹೆನ್ರಿ ಫೋರ್ಡ್ ಅವರು ಹೇಳಿದಂತೆ, "ನೀನು ಸಾಧಿಸಬಲ್ಲೆ ಎಂದು ನಂಬಿದರೆ, ಅರ್ಧ ದಾರಿ ಗೆದ್ದಂತೆ." ನಿಮ್ಮ ಮನಸ್ಸಿನ ಅದ್ಭುತ ಶಕ್ತಿಯನ್ನು ಗುರುತಿಸಿ, ಆತ್ಮವಿಶ್ವಾಸದಿಂದ ಮುನ್ನಡೆದಾಗ ಜಗತ್ತಿನ ಯಾವುದೇ ಶಕ್ತಿಯೂ ನಿಮ್ಮನ್ನು ತಡೆಯಲು ಸಾಧ್ಯವಿಲ್ಲ. ನಿಮ್ಮ ಲೈಫ್ ನಿಮ್ಮದೇ ರೂಲ್ಸ್ ಎನ್ನುತ್ತ ಸದಾ ಹಸನ್ಮುಖಿಯಾಗಿ, ಭರವಸೆಯ ಬೆಳಕನ್ನು ಹರಡುತ್ತಾ ಬದುಕನ್ನು ಸಂಭ್ರಮಿಸಿ.

ಅಜ್ಜಂದಿರ ನೆನಪುಗಳಲ್ಲಿ ಹಳೆಯ ಹಳ್ಳಿ; ಮೊಮ್ಮಕ್ಕಳ ಬದುಕಿನಲ್ಲಿ ಹೊಸ ಜಗತ್ತು!

■ ಉದಯರಶ್ಮಿ ದಿನಪತ್ರಿಕೆ



ಪ್ರಶಾಂತ ಚಿದಂಬರ ಕುಲಕರ್ಣಿ.
ಉಪನ್ಯಾಸಕರು
ಸಿಂದಗಿ – ವಿಜಯಪುರ ಜಿಲ್ಲೆ

ಕಳೆದ ಭಾನುವಾರ ರಜೆ ಇದ್ದುದರಿಂದ ನಮ್ಮೂರಾದ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಸೋಮಜ್ಯಾಳಕ್ಕೆ ಹೋಗಿದ್ದೆ. ಊರಿಗೆ ಹೋದಾಗಲೆಲ್ಲ ಮನಸ್ಸು ತನ್ನಷ್ಟಕ್ಕೆ ತಾನೇ ಬಾಲ್ಯದ ದಿನಗಳತ್ತ ಜಾರುತ್ತದೆ. ನಾವು ಓಡಾಡಿದ ಬೀದಿಗಳು, ಪರಿಚಿತ ಮುಖಗಳು, ಹಳೆಯ ಮನೆಗಳು, ಊರಿನ ಜನರ ಮಾತುಗಳುಇವೆಲ್ಲವೂ ಮನಸ್ಸಿನಲ್ಲಿ ಒಂದಿಷ್ಟು ಆತ್ಮೀಯತೆಯನ್ನು ತುಂಬುತ್ತವೆ. ಕಾಲ ಎಷ್ಟೇ ಬದಲಾಗಲಿ, ನಾವು ಬೆಳೆದ ಊರಿನ ಮಣ್ಣಿನ ಸೆಳೆತ ಮಾತ್ರ ಬದಲಾಗುವುದಿಲ್ಲ.

ಸ್ವಲ್ಪ ಹೊತ್ತು ಊರಲ್ಲಿ ಸುತ್ತಾಡಿ, ಬಸ್ ನಿಲ್ದಾಣದ ಹತ್ತಿರವಿರುವ ಹನುಮ ದೇವರ ಕಟ್ಟೆಯ ಮೇಲೆ ಹೋಗಿ ಕುಳಿತೆ. ಊರಿನ ವಾತಾವರಣವನ್ನು ನೋಡುತ್ತಾ, ಕೈಯಲ್ಲಿದ್ದ ಮೊಬೈಲ್‌ನಲ್ಲಿ ಏನನ್ನೋ ಗಮನಿಸುತ್ತಿದ್ದೆ. ನನ್ನಿಂದ ಸ್ವಲ್ಪ ದೂರದಲ್ಲಿ ಇಬ್ಬರು ಅಜ್ಜಂದಿರು ಕುಳಿತು ಮಾತನಾಡುತ್ತಿದ್ದರು. ಅವರ ಮಾತುಗಳು ಆರಂಭದಲ್ಲಿ ನನ್ನ ಗಮನಕ್ಕೆ ಅಷ್ಟಾಗಿ ಬಂದಿರಲಿಲ್ಲ. ಆದರೆ ಸ್ವಲ್ಪ ಸಮಯ ಕಳೆದಂತೆ ಅವರ ಸಂಭಾಷಣೆಯ ವಿಷಯ ನನ್ನ ಕಿವಿಗೆ ಬೀಳ ತೊಡಗಿತು. ಅವರು ತಮ್ಮ ಹಿಂದಿನ ಬದುಕಿನ ನೆನಪುಗಳನ್ನು ಮೆಲುಕು ಹಾಕುತ್ತಿದ್ದರು. ಅವರ ಮಾತುಗಳಲ್ಲಿ ಹಳೆಯ ಹಳ್ಳಿಯ ಬದುಕಿತ್ತು, ಕೃಷಿಯ ಕಷ್ಟಸುಖಗಳಿದ್ದವು, ಕುಟುಂಬದ ಆತ್ಮೀಯತೆಯಿತ್ತು; ಜೊತೆಗೆ ತಮ್ಮ ಮೊಮ್ಮಕ್ಕಳ ಇಂದಿನ ಜೀವನಶೈಲಿಯ ಬಗ್ಗೆಯೂ ಚರ್ಚೆ ನಡೆಯುತ್ತಿತ್ತು.

ನಾನು ಮೊಬೈಲ್ ನೋಡುತ್ತಲೇ ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ಅವರ ಮಾತುಗಳಲ್ಲಿ ನನಗೆ ಆಸಕ್ತಿ ಮೂಡಿತು. ಅವರು ತಮ್ಮ ಕಾಲದಲ್ಲಿ ಹಳ್ಳಿ ಹೇಗಿತ್ತು, ಜನರು ಹೇಗೆ ಬದುಕುತ್ತಿದ್ದರು, ಕೃಷಿ ಕೆಲಸಗಳಿಗೆ ಎಷ್ಟು ಶ್ರಮ ಪಡಬೇಕಾಗುತ್ತಿತ್ತು, ಕುಟುಂಬದ ಸದಸ್ಯರೆಲ್ಲ ಹೇಗೆ ಒಟ್ಟಾಗಿ ದುಡಿಯುತ್ತಿದ್ದರು, ಸೌಲಭ್ಯಗಳಿಲ್ಲದಿದ್ದರೂ ಬದುಕನ್ನು ಹೇಗೆ ನಿಭಾಯಿಸುತ್ತಿದ್ದರು ಎಂಬುದನ್ನು ನೆನಪಿಸಿಕೊಳ್ಳುತ್ತಿದ್ದರು. ಇಂದಿನ ಮಕ್ಕಳ ಬದುಕು, ಅವರ ಶಿಕ್ಷಣ, ಉದ್ಯೋಗ, ಮೊಬೈಲ್ ಬಳಕೆ, ಬದಲಾಗಿರುವ ಜೀವನಶೈಲಿ ಇವೆಲ್ಲವೂ ಅವರ ಮಾತಿನ ಭಾಗವಾಗಿದ್ದವು.

ಅವರ ಮಾತುಗಳನ್ನು ಕೇಳುತ್ತಾ ನನಗೆ ಅನಿಸಿದ್ದು ಒಂದೇ: ಅವರು ಕೇವಲ ತಮ್ಮ ಕಾಲವನ್ನು ನೆನಪಿಸಿಕೊಳ್ಳುತ್ತಿರಲಿಲ್ಲ; ತಮ್ಮ ಬದುಕಿನಲ್ಲಿ ಕಂಡ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ತಮ್ಮ ಕಣ್ಣೆದುರೇ ಜಗತ್ತು ಬದಲಾಗಿರುವುದನ್ನು ಕಂಡ ಹಿರಿಯರ ಮನಸ್ಸಿನಲ್ಲಿ ಸಹಜವಾಗಿ ಮೂಡುವ ಪ್ರಶ್ನೆಗಳೇ ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿದ್ದವು.

ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದಾಗ ನನ್ನ ಕೈಯಲ್ಲಿದ್ದ ಮೊಬೈಲ್ ಕಡೆಗೆ ಒಮ್ಮೆ ನೋಡಿದೆ. ಅಲ್ಲಿ ಒಂದು ವಿಚಿತ್ರವಾದ ವೈರುಧ್ಯ ನನ್ನ ಅರಿವಿಗೆ ಬಂತು. ಆ ಅಜ್ಜಂದಿರು ತಮ್ಮ ಕಾಲದ ಬದುಕಿನ ಬಗ್ಗೆ ಮಾತನಾಡುತ್ತಿದ್ದರು; ನಾನು ಇಂದಿನ ಕಾಲದ ತಂತ್ರಜ್ಞಾನದಲ್ಲಿ ಮುಳುಗಿದ್ದೆ. ಅವರು ತಮ್ಮ ನೆನಪುಗಳ ಜಗತ್ತಿನಲ್ಲಿ ಸಂಚರಿಸುತ್ತಿದ್ದರೆ, ನಾನು ಮೊಬೈಲ್ ಪರದೆಯ ಜಗತ್ತಿನಲ್ಲಿ ತಲ್ಲೀನನಾಗಿದ್ದೆ. ಇಬ್ಬರೂ ಒಂದೇ ಸ್ಥಳದಲ್ಲಿದ್ದರೂ ನಮ್ಮ ಗಮನದ ಜಗತ್ತುಗಳು ಮಾತ್ರ ಬೇರೆಬೇರೆಯಾಗಿದ್ದವು.

ಆ ಕ್ಷಣದಲ್ಲಿ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆ ಮೂಡಿತು: ಇದೇನಾ ಪೀಳಿಗೆಯ ಅಂತರ? ಅಥವಾ ಒಂದೇ ಸ್ಥಳದಲ್ಲಿ ಕುಳಿತಿದ್ದರೂ ಪರಸ್ಪರರ ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸದ ನಮ್ಮ ಮನೋಭಾವವೇ ನಿಜವಾದ ಅಂತರವೇ?

ನೆನಪುಗಳ ಹಿಂದೆ ಒಂದು ಬದುಕಿದೆ!

ನಾವು ಇಂದು ಹಿರಿಯರು ತಮ್ಮ ಕಾಲವನ್ನು ನೆನಪಿಸಿಕೊಳ್ಳುವುದನ್ನು ಕೇಳಿದಾಗ, ಕೆಲವೊಮ್ಮೆ ಅದನ್ನು ಹಳೆಯ ಕಾಲದ ಹೊಗಳಿಕೆ ಎಂದುಕೊಳ್ಳುತ್ತೇವೆ. “ನಮ್ಮ ಕಾಲದಲ್ಲಿ ಹೀಗಿತ್ತು, ಈಗ ಎಲ್ಲವೂ ಬದಲಾಗಿದೆ” ಎಂಬ ಅವರ ಮಾತುಗಳು ನಮಗೆ ಪುನರಾವರ್ತನೆಯಂತೆ ಅನಿಸಬಹುದು. ಆದರೆ ಆ ಮಾತುಗಳ ಹಿಂದೆ ಅವರು ಬದುಕಿದ ಒಂದು ಇಡೀ ಜೀವನವಿದೆ ಎಂಬುದನ್ನು ಮರೆಯಬಾರದು.

ಅವರು ಹೇಳುವ ಹಳೆಯ ಕಾಲವೆಂದರೆ ಕೇವಲ ಒಂದು ದಿನಾಂಕವಲ್ಲ. ಅದು ಅವರ ಯೌವನದ ದಿನಗಳು; ಬೆವರು ಸುರಿಸಿ ದುಡಿದ ಹೊಲಗಳು; ಮಳೆಗಾಗಿ ಕಾಯುತ್ತಿದ್ದ ರೈತರ ಕಣ್ಣುಗಳು; ಬೆಳೆ ಚೆನ್ನಾಗಿ ಬಂದಾಗ ಮನೆಯಲ್ಲಿದ್ದ ಸಂತೋಷ; ಬೆಳೆ ಕೈಕೊಟ್ಟಾಗ ಕುಟುಂಬ ಅನುಭವಿಸಿದ ಸಂಕಷ್ಟಗಳು. ಅದು ಸೌಲಭ್ಯಗಳು ಕಡಿಮೆಯಿದ್ದರೂ ಬದುಕನ್ನು ನಿಭಾಯಿಸಿದ ಅವರ ಅನುಭವಗಳ ಜಗತ್ತು.

ಆಗಿನ ಹಳ್ಳಿಯ ಬದುಕಿನಲ್ಲಿ ಕೃಷಿ ಅನೇಕ ಕುಟುಂಬಗಳ ಜೀವನಾಧಾರವಾಗಿತ್ತು. ಬೆಳಗಾಗುವ ಮೊದಲೇ ದಿನದ ಕೆಲಸ ಆರಂಭವಾಗುತ್ತಿತ್ತು. ಹೊಲಕ್ಕೆ ಹೋಗುವುದು, ಜಾನುವಾರುಗಳನ್ನು ನೋಡಿಕೊಳ್ಳುವುದು, ಕೃಷಿ ಉಪಕರಣಗಳನ್ನು ಸಿದ್ಧಪಡಿಸುವುದು, ಬಿತ್ತನೆ ಮತ್ತು ಕೊಯ್ಲಿನ ಕೆಲಸಗಳಲ್ಲಿ ಇಡೀ ಕುಟುಂಬವೇ ಕೈಜೋಡಿಸುವುದು ಸಾಮಾನ್ಯವಾಗಿತ್ತು. ದುಡಿಮೆಗೆ ಪರ್ಯಾಯವಿರಲಿಲ್ಲ. ಬದುಕು ಸುಲಭವಾಗಿರಲಿಲ್ಲ; ಆದರೆ ಬದುಕಿನ ಪ್ರತಿಯೊಂದು ಹಂತದಲ್ಲೂ ಶ್ರಮದ ಬೆಲೆ ತಿಳಿದಿತ್ತು.

ಮನೆಯಲ್ಲಿದ್ದ ಹಿರಿಯರ ಮಾತಿಗೆ ಗೌರವವಿತ್ತು. ಕುಟುಂಬದ ಸದಸ್ಯರು ಪರಸ್ಪರ ಅವಲಂಬಿತರಾಗಿದ್ದರು. ಊರಿನಲ್ಲಿ ಯಾರಿಗಾದರೂ ಕಷ್ಟ ಬಂದರೆ ನೆರವಿಗೆ ಧಾವಿಸುವ ಮನಸ್ಸು ಅನೇಕರಲ್ಲಿತ್ತು. ಮದುವೆ, ಹಬ್ಬ, ಜಾತ್ರೆ, ಕೃಷಿ ಕೆಲಸ ಹೀಗೆ ಹಲವು ಸಂದರ್ಭಗಳು ಜನರನ್ನು ಒಟ್ಟುಗೂಡಿಸುತ್ತಿದ್ದವು. ನೆರೆಮನೆಯವರ ಸುಖದುಃಖಗಳೂ ನಮ್ಮ ಮನೆಯ ವಿಚಾರಗಳಂತೆ ಭಾಸವಾಗುತ್ತಿದ್ದವು.

ಆದರೆ ಹಿಂದಿನ ಕಾಲವೆಲ್ಲ ಸುಖಮಯವಾಗಿತ್ತು ಎಂದು ಹೇಳಲಾಗದು. ಉತ್ತಮ ಶಿಕ್ಷಣ ಪಡೆಯಲು ಅವಕಾಶಗಳು ಕಡಿಮೆಯಾಗಿದ್ದವು. ಆರೋಗ್ಯ ಸಮಸ್ಯೆ ಎದುರಾದಾಗ ಸೂಕ್ತ ಚಿಕಿತ್ಸೆ ಪಡೆಯುವುದು ಕಷ್ಟವಾಗುತ್ತಿತ್ತು. ಸಾರಿಗೆ, ಸಂಪರ್ಕ ಮತ್ತು ಇಂದಿನ ಅನೇಕ ಸೌಲಭ್ಯಗಳು ಇರಲಿಲ್ಲ. ಅನೇಕರು ತಮ್ಮ ಆಸೆಗಳನ್ನು ಬದಿಗಿಟ್ಟು ಕುಟುಂಬಕ್ಕಾಗಿ ದುಡಿಯಬೇಕಾಗುತ್ತಿತ್ತು. ಇಂದಿನ ಪೀಳಿಗೆಗೆ ಸಹಜವಾಗಿ ದೊರೆಯುವ ಹಲವು ಅವಕಾಶಗಳು ಅಂದಿನವರಿಗೆ ಕನಸಾಗಿದ್ದವು.

ಹೀಗಾಗಿ ಹಿರಿಯರು ತಮ್ಮ ಕಾಲವನ್ನು ನೆನಪಿಸಿಕೊಂಡಾಗ, ಅವರ ಮಾತುಗಳ ಹಿಂದೆ ಇರುವ ಶ್ರಮವನ್ನೂ ಅರ್ಥಮಾಡಿಕೊಳ್ಳಬೇಕು; ಅದೇ ಸಮಯದಲ್ಲಿ ಅವರು ಅನುಭವಿಸಿದ ಕೊರತೆಗಳನ್ನೂ ಮರೆಯಬಾರದು. ಅವರ ಅನುಭವವನ್ನು ಗೌರವಿಸುವುದು ಎಂದರೆ ಹಳೆಯ ಕಾಲದ ಪ್ರತಿಯೊಂದು ಪದ್ಧತಿಯನ್ನೂ ಒಪ್ಪಿಕೊಳ್ಳುವುದಲ್ಲ. ಅವರು ಬದುಕಿದ ಕಾಲವನ್ನು ಅದರ ಸಂಪೂರ್ಣತೆಯಲ್ಲಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುವುದು.

ಇಂದಿನ ಪೀಳಿಗೆಯ ಬದುಕೂ ಸುಲಭವಲ್ಲ!

ಹಿರಿಯರು ತಮ್ಮ ಕಾಲದ ಕಷ್ಟಗಳನ್ನು ನೆನಪಿಸಿಕೊಳ್ಳುವಾಗ, ಇಂದಿನ ಯುವಜನರಿಗೆ ಸೌಲಭ್ಯಗಳು ಹೆಚ್ಚಾಗಿವೆ ಎಂಬುದು ನಿಜ. ಆದರೆ ಸೌಲಭ್ಯಗಳು ಹೆಚ್ಚಾದರೆ ಬದುಕಿನ ಎಲ್ಲ ಸಮಸ್ಯೆಗಳೂ ಕಡಿಮೆಯಾಗುತ್ತವೆ ಎಂದರ್ಥವಲ್ಲ.

ಇಂದು ಶಿಕ್ಷಣ ಪಡೆಯಲು ಅವಕಾಶಗಳಿವೆ. ಉನ್ನತ ಶಿಕ್ಷಣಕ್ಕಾಗಿ ದೂರದ ಊರುಗಳಿಗೆ ಹೋಗಬಹುದು. ಮೊಬೈಲ್ ಮೂಲಕ ಜಗತ್ತಿನ ಜ್ಞಾನವನ್ನು ಪಡೆಯಬಹುದು. ಕೃಷಿಯ ಜೊತೆಗೆ ಅನೇಕ ಹೊಸ ಉದ್ಯೋಗ ಕ್ಷೇತ್ರಗಳು ತೆರೆದುಕೊಂಡಿವೆ. ವೈದ್ಯಕೀಯ, ತಂತ್ರಜ್ಞಾನ, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳು ಬದುಕನ್ನು ಹಿಂದಿನ ಕಾಲಕ್ಕಿಂತ ಸುಲಭಗೊಳಿಸಿವೆ. ಇವೆಲ್ಲವೂ ಕಾಲ ನಮಗೆ ನೀಡಿದ ಅಮೂಲ್ಯ ಕೊಡುಗೆಗಳು.

ಆದರೆ ಇಂದಿನ ಯುವಜನರ ಬದುಕಿನ ಸವಾಲುಗಳೂ ಬೇರೆ ರೀತಿಯಲ್ಲಿವೆ. ಶಿಕ್ಷಣದ ಸ್ಪರ್ಧೆ, ಉದ್ಯೋಗದ ಅನಿಶ್ಚಿತತೆ, ಆರ್ಥಿಕ ಒತ್ತಡ, ಕುಟುಂಬದಿಂದ ದೂರವಿದ್ದು ಬದುಕಬೇಕಾದ ಅನಿವಾರ್ಯತೆ, ಸಮಾಜದ ನಿರೀಕ್ಷೆಗಳು ಇವೆಲ್ಲವೂ ಅವರ ಬದುಕಿನ ಭಾಗವಾಗಿವೆ. ಹಿಂದೆ ಬದುಕುಳಿಯಲು ದೈಹಿಕ ಶ್ರಮ ಮುಖ್ಯವಾಗಿದ್ದರೆ, ಇಂದು ಅನೇಕ ಸಂದರ್ಭಗಳಲ್ಲಿ ಮಾನಸಿಕ ಒತ್ತಡವನ್ನು ನಿಭಾಯಿಸುವುದೂ ದೊಡ್ಡ ಸವಾಲಾಗಿದೆ.

ಒಂದು ಕಾಲದಲ್ಲಿ ತಂದೆ–ತಾಯಿಯರ ಜೊತೆ ಹೊಲದಲ್ಲಿ ದುಡಿಯುತ್ತಿದ್ದ ಮಕ್ಕಳು ಇಂದು ಉನ್ನತ ಶಿಕ್ಷಣಕ್ಕಾಗಿ ಬೇರೆ ನಗರಗಳಿಗೆ ತೆರಳುತ್ತಿದ್ದಾರೆ. ಉದ್ಯೋಗದ ಕಾರಣಕ್ಕೆ ಬೇರೆ ರಾಜ್ಯಗಳಲ್ಲಿ ಅಥವಾ ದೇಶಗಳಲ್ಲಿ ನೆಲೆಸುತ್ತಿದ್ದಾರೆ. ಅವರ ಬದುಕಿನ ಅಗತ್ಯಗಳು ಬದಲಾಗಿವೆ. ಕುಟುಂಬವನ್ನು ಪ್ರೀತಿಸದ ಕಾರಣಕ್ಕೆ ಅವರು ದೂರ ಹೋಗುವುದಿಲ್ಲ; ಕೆಲವೊಮ್ಮೆ ಕುಟುಂಬದ ಭವಿಷ್ಯವನ್ನು ಉತ್ತಮಗೊಳಿಸುವ ಉದ್ದೇಶದಿಂದಲೇ ದೂರದ ಬದುಕನ್ನು ಆಯ್ಕೆ ಮಾಡುತ್ತಾರೆ.

ಆದರೆ ಈ ಬದಲಾವಣೆಯನ್ನು ಹಿರಿಯರು ತಮ್ಮ ದೃಷ್ಟಿಕೋನದಿಂದ ನೋಡುವಾಗ ಅವರಿಗೆ ನೋವಾಗಬಹುದು. “ನಮ್ಮ ಕಾಲದಲ್ಲಿ ಎಲ್ಲರೂ ಒಟ್ಟಿಗೆ ಇರುತ್ತಿದ್ದೆವು; ಈಗ ಮಕ್ಕಳು ನಮ್ಮ ಜೊತೆ ಕುಳಿತು ಮಾತನಾಡಲು ಸಮಯವಿಲ್ಲ” ಎಂಬ ಭಾವನೆ ಅವರ ಮನಸ್ಸಿನಲ್ಲಿ ಮೂಡಬಹುದು. ಅದೇ ಸಮಯದಲ್ಲಿ ಯುವಕರು, “ನಮ್ಮ ಮೇಲಿರುವ ಜವಾಬ್ದಾರಿಗಳು ಮತ್ತು ಒತ್ತಡಗಳನ್ನು ಹಿರಿಯರು ಅರ್ಥಮಾಡಿಕೊಳ್ಳುವುದಿಲ್ಲ” ಎಂದು ಭಾವಿಸಬಹುದು.

ಇಬ್ಬರ ಭಾವನೆಗಳಲ್ಲೂ ಒಂದು ಸತ್ಯವಿದೆ. ಹಿರಿಯರಿಗೆ ತಮ್ಮ ಮಕ್ಕಳ ಒಡನಾಟ ಬೇಕು; ಯುವಕರಿಗೆ ತಮ್ಮ ಬದುಕನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯ ಬೇಕು. ಹಿರಿಯರು ತಮ್ಮ ಅನುಭವಕ್ಕೆ ಮೌಲ್ಯ ಸಿಗಬೇಕೆಂದು ಬಯಸುತ್ತಾರೆ; ಯುವಕರು ತಮ್ಮ ಆಲೋಚನೆಗಳಿಗೂ ಗೌರವ ದೊರೆಯಬೇಕೆಂದು ನಿರೀಕ್ಷಿಸುತ್ತಾರೆ.

ಸಮಸ್ಯೆ ಪ್ರೀತಿಯ ಕೊರತೆಯಿಂದಲೇ ಉಂಟಾಗಬೇಕೆಂದಿಲ್ಲ. ಕೆಲವೊಮ್ಮೆ ಪ್ರೀತಿಯನ್ನು ವ್ಯಕ್ತಪಡಿಸುವ ವಿಧಾನ ಬೇರೆಯಾಗಿರುವುದರಿಂದಲೂ ಅಂತರ ಬೆಳೆಯುತ್ತದೆ.

ಮೊಬೈಲ್ ತಪ್ಪಿತಸ್ಥನೇ?

ಆ ದಿನ ಹನುಮ ದೇವರ ಕಟ್ಟೆಯ ಮೇಲೆ ಕುಳಿತಿದ್ದಾಗ ನನ್ನ ಕೈಯಲ್ಲಿದ್ದ ಮೊಬೈಲ್ ನನ್ನ ಗಮನವನ್ನು ಸೆಳೆಯುತ್ತಿತ್ತು. ಅದೇ ಸಮಯದಲ್ಲಿ ನನ್ನಿಂದ ಸ್ವಲ್ಪ ದೂರದಲ್ಲಿ ಇಬ್ಬರು ಹಿರಿಯರು ತಮ್ಮ ಬದುಕಿನ ನೆನಪುಗಳನ್ನು ಹಂಚಿಕೊಳ್ಳುತ್ತಿದ್ದರು. ಅವರ ಮಾತುಗಳನ್ನು ಕೇಳಿಸಿಕೊಂಡರೂ ನಾನು ಅವರ ಬಳಿ ಹೋಗಿ ಮಾತನಾಡುವ ಪ್ರಯತ್ನ ಮಾಡಲಿಲ್ಲ.

ನಂತರ ಯೋಚಿಸಿದಾಗ, ಅವರ ಬಳಿಗೆ ಹೋಗಿ ಕುಳಿತಿದ್ದರೆ ಏನಾಗುತ್ತಿತ್ತು ಎಂದು ಅನಿಸಿತು. ಅವರ ಕಾಲದ ಬದುಕಿನ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬಹುದಿತ್ತು. ಕೃಷಿಯಲ್ಲಿನ ಬದಲಾವಣೆಗಳ ಬಗ್ಗೆ ಕೇಳಬಹುದಿತ್ತು. ಕುಟುಂಬದ ಜೀವನ ಹೇಗಿತ್ತು, ಊರಿನಲ್ಲಿ ಹಿಂದೆ ಯಾವ ರೀತಿಯ ಸಂಬಂಧಗಳಿದ್ದವು, ಇಂದಿನ ಮಕ್ಕಳ ಬದುಕಿನಲ್ಲಿ ಅವರಿಗೆ ಯಾವ ಬದಲಾವಣೆಗಳು ಕಾಣಿಸುತ್ತವೆ ಎಂಬುದನ್ನು ತಿಳಿದುಕೊಳ್ಳಬಹುದಿತ್ತು.

ಅವರಿಗೂ ನನ್ನೊಂದಿಗೆ ಮಾತನಾಡಲು ಅವಕಾಶ ಸಿಗುತ್ತಿತ್ತು. ಇಂದಿನ ಯುವಜನರು ಎದುರಿಸುವ ಶಿಕ್ಷಣ ಮತ್ತು ಉದ್ಯೋಗದ ಸವಾಲುಗಳ ಬಗ್ಗೆ ನನ್ನ ಅಭಿಪ್ರಾಯ ಹಂಚಿಕೊಳ್ಳಬಹುದಿತ್ತು. ಬಹುಶಃ ಅವರ ಕೆಲವು ಅಭಿಪ್ರಾಯಗಳನ್ನು ನಾನು ಅರ್ಥಮಾಡಿಕೊಳ್ಳುತ್ತಿದ್ದೆ; ನನ್ನ ಬದುಕಿನ ಕೆಲವು ಆಯಾಮಗಳನ್ನು ಅವರೂ ಅರ್ಥಮಾಡಿಕೊಳ್ಳಬಹುದಿತ್ತು.

ಆದರೆ ನಾನು ಹಾಗೆ ಮಾಡಲಿಲ್ಲ. ನನ್ನ ಮೊಬೈಲ್‌ನಲ್ಲೇ ತಲ್ಲೀನನಾಗಿದ್ದೆ. ಇದು ದೊಡ್ಡ ತಪ್ಪು ಎಂದು ನನ್ನನ್ನು ನಾನೇ ದೂಷಿಸಿಕೊಳ್ಳಬೇಕೆಂದಿಲ್ಲ. ಮೊಬೈಲ್ ನೋಡುವುದು ತಪ್ಪಲ್ಲ. ಅದನ್ನು ಬಳಸುವುದು ಇಂದಿನ ಬದುಕಿನ ಸಹಜ ಭಾಗವಾಗಿದೆ. ಅದೇ ರೀತಿ, ಅಲ್ಲಿದ್ದ ಹಿರಿಯರ ಬಳಿ ಹೋಗಿ ಮಾತನಾಡಲೇಬೇಕಿತ್ತು ಎಂಬ ನಿಯಮವೂ ಇರಲಿಲ್ಲ.

ಆದರೆ ಆ ಕ್ಷಣ ನನಗೆ ಒಂದು ಸಣ್ಣ ಪಾಠ ಕಲಿಸಿತು: ನಮ್ಮ ಸುತ್ತಲೂ ಒಳ್ಳೆಯ ಸಂಭಾಷಣೆಗೆ ಅವಕಾಶವಿದ್ದರೂ, ಕೆಲವೊಮ್ಮೆ ಅದನ್ನು ಗಮನಿಸದೆ ನಾವು ನಮ್ಮದೇ ಜಗತ್ತಿನಲ್ಲಿ ಮುಳುಗಿರುತ್ತೇವೆ.

ಮೊಬೈಲ್ ಜಗತ್ತಿನೊಂದಿಗೆ ನಮ್ಮನ್ನು ಸಂಪರ್ಕಿಸುತ್ತದೆ. ದೂರದಲ್ಲಿರುವವರನ್ನು ಹತ್ತಿರಕ್ಕೆ ತರುತ್ತದೆ. ಆದರೆ ನಮ್ಮ ಪಕ್ಕದಲ್ಲಿರುವವರನ್ನು ಗಮನಿಸುವುದನ್ನೇ ಮರೆಸಿದರೆ, ಆ ಸಂಪರ್ಕಕ್ಕೆ ಒಂದು ಮಿತಿ ಹಾಕಿಕೊಳ್ಳಬೇಕಾಗುತ್ತದೆ. ತಂತ್ರಜ್ಞಾನ ನಮ್ಮ ಬದುಕನ್ನು ಸುಲಭಗೊಳಿಸಬೇಕು; ಬದುಕಿನಲ್ಲಿರುವ ಮಾನವೀಯ ಸಂಬಂಧಗಳಿಗೆ ಪರ್ಯಾಯವಾಗಬಾರದು.

ಹಾಗೆಂದು ಮೊಬೈಲ್ ಬಳಸುವ ಪ್ರತಿಯೊಬ್ಬ ಯುವಕನನ್ನೂ ದೂಷಿಸುವುದು ಸರಿಯಲ್ಲ. ಮೊಬೈಲ್ ಮೂಲಕ ಜ್ಞಾನ ಪಡೆಯುವವರಿದ್ದಾರೆ, ಉದ್ಯೋಗ ಮಾಡುವವರಿದ್ದಾರೆ, ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುವವರಿದ್ದಾರೆ. ಸಾಧನವನ್ನು ಬಳಸುವ ವಿಧಾನವೇ ಮುಖ್ಯ. ಅದೇ ರೀತಿ, ಹಿರಿಯರ ಅನುಭವವನ್ನು ಗೌರವಿಸುವುದೆಂದರೆ ಯುವಜನರ ಪ್ರತಿಯೊಂದು ಹೊಸ ಆಯ್ಕೆಯನ್ನೂ ತಪ್ಪೆಂದು ಪರಿಗಣಿಸುವುದಲ್ಲ.

ಆ ದಿನ ನಾನು ಆ ಅಜ್ಜಂದಿರೊಂದಿಗೆ ಮಾತನಾಡಿದ್ದರೆ, ಅವರ ಬದುಕಿನ ಅನುಭವಗಳನ್ನು ಇನ್ನಷ್ಟು ಹತ್ತಿರದಿಂದ ತಿಳಿದುಕೊಳ್ಳಬಹುದಿತ್ತು. ಮಾತನಾಡಲಿಲ್ಲವೆಂಬ ಕಾರಣಕ್ಕೆ ಅವರ ಮಾತುಗಳೆಲ್ಲ ಸರಿ ಎಂದಾಗುವುದಿಲ್ಲ; ಮಾತನಾಡಿದ್ದರೆ ನನ್ನ ಅಭಿಪ್ರಾಯಗಳೆಲ್ಲ ಸರಿ ಎಂದೂ ಆಗುತ್ತಿರಲಿಲ್ಲ. ಆದರೆ ಸಂಭಾಷಣೆ ನಡೆದಿದ್ದರೆ, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ ಒಂದು ಅವಕಾಶ ಖಂಡಿತ ಸಿಗುತ್ತಿತ್ತು.

ಹಿರಿಯರು ತಪ್ಪಲ್ಲ; ಯುವಕರೂ ತಪ್ಪಲ್ಲ!

ಪೀಳಿಗೆಯ ಅಂತರದ ಚರ್ಚೆಯಲ್ಲಿ ನಾವು ಸಾಮಾನ್ಯವಾಗಿ ಒಬ್ಬರನ್ನು ಸರಿ, ಮತ್ತೊಬ್ಬರನ್ನು ತಪ್ಪು ಎಂದು ನಿರ್ಧರಿಸಲು ಪ್ರಯತ್ನಿಸುತ್ತೇವೆ. ಹಿರಿಯರು ಇಂದಿನ ಮಕ್ಕಳನ್ನು ಟೀಕಿಸಿದರೆ ಅವರನ್ನು ಹಳೆಯ ವಿಚಾರದವರು ಎನ್ನುತ್ತೇವೆ. ಯುವಕರು ತಮ್ಮದೇ ನಿರ್ಧಾರಗಳನ್ನು ತೆಗೆದುಕೊಂಡರೆ ಅವರನ್ನು ಹಿರಿಯರನ್ನು ಗೌರವಿಸದವರು ಎಂದು ಕರೆಯುತ್ತೇವೆ.

ಆದರೆ ಜೀವನ ಅಷ್ಟು ಸರಳವಾದ ಲೆಕ್ಕಾಚಾರವಲ್ಲ.

ಹಿರಿಯರು ತಮ್ಮ ಅನುಭವದ ಆಧಾರದಲ್ಲಿ ಮಾತನಾಡುತ್ತಾರೆ. ಅವರು ಎದುರಿಸಿದ ಕಷ್ಟಗಳು, ಕಂಡ ಸಂಬಂಧಗಳು, ಬದುಕಿನಲ್ಲಿ ಕಲಿತ ಪಾಠಗಳು ಅವರ ಆಲೋಚನೆಗಳನ್ನು ರೂಪಿಸಿವೆ. ಯುವಕರು ತಮ್ಮ ಕಾಲದ ಪರಿಸ್ಥಿತಿಗೆ ಅನುಗುಣವಾಗಿ ಆಲೋಚಿಸುತ್ತಾರೆ. ಅವರು ಪಡೆದ ಶಿಕ್ಷಣ, ಕಂಡ ಜಗತ್ತು, ಎದುರಿಸುತ್ತಿರುವ ಸವಾಲುಗಳು ಅವರ ನಿರ್ಧಾರಗಳನ್ನು ರೂಪಿಸುತ್ತವೆ.

ಇಬ್ಬರೂ ತಮ್ಮ ಅನುಭವದ ನೆಲೆಯಲ್ಲಿಯೇ ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಹೀಗಿರುವಾಗ ಒಬ್ಬರ ಅನುಭವವನ್ನು ಮತ್ತೊಬ್ಬರು ತಿರಸ್ಕರಿಸಿದರೆ ಅಂತರ ಹೆಚ್ಚಾಗುತ್ತದೆ. ಬದಲಾಗಿ, “ನೀವು ಹಾಗೆ ಯೋಚಿಸಲು ಕಾರಣವೇನು?” ಎಂದು ಕೇಳುವ ಮನಸ್ಸಿದ್ದರೆ ಅಂತರ ಕಡಿಮೆಯಾಗಲು ಆರಂಭಿಸುತ್ತದೆ.

ಹಿರಿಯರು ಯುವಕರಿಗೆ ಸಲಹೆ ನೀಡುವಾಗ ಅವರ ಪರಿಸ್ಥಿತಿಯನ್ನೂ ಅರ್ಥಮಾಡಿಕೊಳ್ಳಬೇಕು. ಯುವಕರು ಹಿರಿಯರ ಮಾತು ಕೇಳುವಾಗ ಅವರ ವಯಸ್ಸನ್ನು ಮಾತ್ರವಲ್ಲ, ಆ ವಯಸ್ಸಿನ ಹಿಂದೆ ಇರುವ ಅನುಭವವನ್ನೂ ಗೌರವಿಸಬೇಕು. ಪ್ರತಿಯೊಂದು ಸಲಹೆಯನ್ನೂ ಕಡ್ಡಾಯವಾಗಿ ಪಾಲಿಸಬೇಕೆಂದಿಲ್ಲ; ಆದರೆ ಅದರ ಹಿಂದಿರುವ ಕಾಳಜಿಯನ್ನು ಅರ್ಥಮಾಡಿಕೊಳ್ಳಬಹುದು. ಪ್ರತಿಯೊಂದು ಹೊಸ ಆಲೋಚನೆಯನ್ನೂ ಹಿರಿಯರು ಒಪ್ಪಿಕೊಳ್ಳಬೇಕೆಂದಿಲ್ಲ; ಆದರೆ ಅದನ್ನು ಕೇಳಿಸಿಕೊಳ್ಳಬಹುದು.

ಗೌರವ ಎಂದರೆ ಪ್ರಶ್ನಿಸದೆ ಒಪ್ಪಿಕೊಳ್ಳುವುದಲ್ಲ; ಭಿನ್ನಾಭಿಪ್ರಾಯವಿದ್ದರೂ ಪರಸ್ಪರರ ಮಾತಿಗೆ ಕಿವಿಗೊಡುವುದು.

ಒಂದು ಮಾತುಕತೆ ಅಂತರವನ್ನು ಕಡಿಮೆ ಮಾಡಬಲ್ಲದು

ಇಂದು ಅನೇಕ ಮನೆಗಳಲ್ಲಿ ಅಜ್ಜ–ಅಜ್ಜಿ, ತಂದೆ–ತಾಯಿ ಮತ್ತು ಮಕ್ಕಳು ಒಂದೇ ಸೂರಿನಡಿ ಬದುಕುತ್ತಿದ್ದರೂ ಅವರ ನಡುವಿನ ಮಾತುಕತೆ ಕಡಿಮೆಯಾಗುತ್ತಿದೆ. ಮಕ್ಕಳಿಗೆ ಶಾಲೆ, ಕಾಲೇಜು, ಉದ್ಯೋಗ ಮತ್ತು ಸ್ನೇಹಿತರ ಜಗತ್ತು ಇದೆ. ಹಿರಿಯರಿಗೆ ತಮ್ಮ ನೆನಪುಗಳು, ದಿನನಿತ್ಯದ ಅನುಭವಗಳು ಮತ್ತು ಕುಟುಂಬದ ಬಗ್ಗೆ ಕಾಳಜಿ ಇದೆ. ಆದರೆ ಈ ಎರಡು ಜಗತ್ತುಗಳು ಪರಸ್ಪರ ಬೆರೆಯಲು ಸಮಯವೇ ಸಿಗದಂತಾಗಿದೆ.

ಒಂದು ದಿನ ಮನೆಯ ಹಿರಿಯರ ಬಳಿ ಕುಳಿತು, “ನಿಮ್ಮ ಬಾಲ್ಯ ಹೇಗಿತ್ತು? ನೀವು ಓದಿದ್ದು ಹೇಗೆ? ಕೃಷಿ ಕೆಲಸಕ್ಕೆ ಹೋಗುತ್ತಿದ್ದಿರಾ? ನಮ್ಮ ಊರು ಹಿಂದೆ ಹೇಗಿತ್ತು?” ಎಂದು ಕೇಳಿ ನೋಡಿ. ಅವರು ಹೇಳುವ ಕಥೆಗಳಲ್ಲಿ ಕೇವಲ ಹಳೆಯ ನೆನಪುಗಳಿರುವುದಿಲ್ಲ; ನಮ್ಮ ಕುಟುಂಬದ ಇತಿಹಾಸವಿರುತ್ತದೆ, ಊರಿನ ಬದಲಾವಣೆಗಳಿರುತ್ತವೆ, ಬದುಕನ್ನು ಎದುರಿಸಿದ ಧೈರ್ಯವಿರುತ್ತದೆ.

ಅದೇ ರೀತಿ, ಹಿರಿಯರೂ ತಮ್ಮ ಮೊಮ್ಮಕ್ಕಳೊಂದಿಗೆ ಕುಳಿತು ಅವರ ಆಸಕ್ತಿಗಳು, ಕನಸುಗಳು, ಗುರಿಗಳು ಮತ್ತು ಆತಂಕಗಳ ಬಗ್ಗೆ ಮಾತನಾಡಬಹುದು. ಅವರು ಮೊಬೈಲ್‌ನಲ್ಲಿ ಏನು ಮಾಡುತ್ತಿದ್ದಾರೆ ಎಂಬುದನ್ನು ಕೇಳುವುದಷ್ಟೇ ಅಲ್ಲ, ಅದರಿಂದ ಏನು ಕಲಿಯುತ್ತಿದ್ದಾರೆ ಎಂಬುದನ್ನೂ ತಿಳಿದುಕೊಳ್ಳಬಹುದು. ಯುವಜನರ ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ, ಅವರ ಕೆಲವು ಆಯ್ಕೆಗಳು ಮೊದಲಿಗೆ ಕಾಣಿಸಿದಷ್ಟು ವಿಚಿತ್ರವಾಗಿರುವುದಿಲ್ಲ.

ಕೆಲವೊಮ್ಮೆ ದೊಡ್ಡ ಉಪನ್ಯಾಸಗಳಿಗಿಂತ ಒಂದು ಸಣ್ಣ ಪ್ರಶ್ನೆ ಸಂಬಂಧಗಳನ್ನು ಹತ್ತಿರಕ್ಕೆ ತರುತ್ತದೆ. ಒಂದು ಕಪ್ ಚಹಾದ ಜೊತೆಗಿನ ಮಾತುಕತೆ, ಊಟದ ಮೇಜಿನ ಮೇಲಿನ ಹಂಚಿಕೆ, ಹಳೆಯ ಫೋಟೋಗಳನ್ನು ನೋಡುತ್ತಾ ನಡೆಸುವ ಸಂಭಾಷಣೆ ಇವೆಲ್ಲವೂ ಪೀಳಿಗೆಗಳ ನಡುವೆ ಸೇತುವೆಯಾಗಬಲ್ಲವು.

ಹಿರಿಯರಿಗೂ ಒಂದು ಆಸೆ ಇರುತ್ತದೆ: ತಮ್ಮ ಮಾತುಗಳನ್ನು ಯಾರಾದರೂ ಆಸಕ್ತಿಯಿಂದ ಕೇಳಬೇಕು. ಯುವಕರಿಗೂ ಒಂದು ಆಸೆ ಇರುತ್ತದೆ: ತಮ್ಮ ಭಾವನೆಗಳನ್ನು ಯಾರಾದರೂ ಅರ್ಥಮಾಡಿಕೊಳ್ಳಬೇಕು. ಈ ಎರಡೂ ಆಸೆಗಳಿಗೆ ಉತ್ತರ ಸಿಗುವುದು ಪರಸ್ಪರ ಕೇಳಿಸಿಕೊಳ್ಳುವ ಮನಸ್ಸಿನಿಂದಲೇ.


ಕೊನೆಯದಾಗಿ...

ಸೋಮಜ್ಯಾಳದ ಹನುಮ ದೇವರ ಕಟ್ಟೆಯ ಮೇಲೆ ಕುಳಿತುಕೊಂಡಿದ್ದ ಆ ದಿನದ ಘಟನೆ ನನ್ನ ಪಾಲಿಗೆ ಒಂದು ಸಾಮಾನ್ಯ ಅನುಭವವಾಗಿಯೇ ಆರಂಭವಾಯಿತು. ಆದರೆ ಇಬ್ಬರು ಅಜ್ಜಂದಿರು ತಮ್ಮ ಹಿಂದಿನ ಬದುಕನ್ನು ನೆನಪಿಸಿಕೊಳ್ಳುತ್ತಾ, ಮೊಮ್ಮಕ್ಕಳ ಇಂದಿನ ಜೀವನಶೈಲಿಯ ಬಗ್ಗೆ ಮಾತನಾಡುತ್ತಿದ್ದುದನ್ನು ಕೇಳಿಸಿಕೊಂಡಾಗ, ಪೀಳಿಗೆಯ ಅಂತರದ ಬಗ್ಗೆ ಮತ್ತೊಮ್ಮೆ ಯೋಚಿಸುವಂತಾಯಿತು. ಪೀಳಿಗೆಯ ಅಂತರವನ್ನು ಕಡಿಮೆ ಮಾಡಲು ಹಿರಿಯರು ತಮ್ಮ ಕಾಲವನ್ನು ಮರೆಯಬೇಕಿಲ್ಲ; ಯುವಕರು ತಮ್ಮ ಕಾಲವನ್ನು ಬಿಟ್ಟುಕೊಡಬೇಕಿಲ್ಲ. ಇಬ್ಬರೂ ಪರಸ್ಪರರ ಬದುಕನ್ನು ಅರ್ಥಮಾಡಿಕೊಳ್ಳಲು ಸ್ವಲ್ಪ ಸಮಯ, ಸ್ವಲ್ಪ ತಾಳ್ಮೆ ಮತ್ತು ಸ್ವಲ್ಪ ಪ್ರೀತಿಯನ್ನು ಹಂಚಿಕೊಂಡರೆ ಸಾಕು. ವಯಸ್ಸಿನ ಅಂತರ ಸಹಜ; ಮನಸ್ಸಿನ ಅಂತರ ಅನಿವಾರ್ಯವಲ್ಲ. ಪೀಳಿಗೆಗಳು ಬೇರೆಬೇರೆಯಾಗಿರಲಿ, ಆದರೆ ಹೃದಯಗಳು ದೂರವಾಗದಿರಲಿ.









ನಬಿರೋಶನ್ ಪ್ರಕಾಶನ, ಬೋರಗಿ ವತಿಯಿಂದ ಕ್ರೀಡಾ ಸಮವಸ್ತ್ರ ವಿತರಣೆ

ಆರೋಗ್ಯಕರ ಬದುಕಿಗೆ ಕ್ರೀಡೆ ಸಹಕಾರಿ :ಮೌಲಾಲಿ ಆಲಗೂರ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಬದುಕಿಗೆ ಕ್ರೀಡೆ ಸಹಾಯಕಾರಿ, ಹೀಗಾಗಿ ಕಲಿಕೆ ಜೊತೆಗೆ ಕ್ರೀಡೆಗೂ ಮಹತ್ವ ನೀಡಿದರೆ ಮಕ್ಕಳಲ್ಲಿ ಆತ್ಮ ಸ್ಥೈರ್ಯ ಹೆಚ್ಚುತ್ತದೆ ಎಂದ ಆರಕ್ಷಕ. ಮೌಲಾಲಿ ಆಲಗೂರ ಹೇಳಿದರು.

ತಾಲೂಕಿನ ಬೋರಗಿ ಗ್ರಾಮದ ಸರ್ಕಾರಿ ಉನ್ನತಿಕರಿಸಿದ ಶಾಲಾ ವಿದ್ಯಾರ್ಥಿಗಳು ತಾಲೂಕು ಮಟ್ಟದ ವಿವಿಧ ವಿಭಾಗದ ಕ್ರೀಡಾಕೂಟದಲ್ಲಿ ಗೆಲುವು ಸಾಧಿಸಿ, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಹಿನ್ನೆಲೆ ನಬಿರೋಶನ್ ಪ್ರಕಾಶನ ವತಿಯಿಂದ 7 ವಿದ್ಯಾರ್ಥಿಗಳಿಗೆ ಕ್ರೀಡಾ ಸಮವಸ್ತ್ರ ನೀಡಿ ಮಾತನಾಡಿದರು.ಕಲಿಕೆ ಜ್ಞಾನ ಹೆಚ್ಚಿಸಿದರೆ ಕ್ರೀಡೆ ಆರೋಗ್ಯಕರ ಬದುಕಿಗೆ ಬುನಾದಿ. ಹೀಗಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕ್ರೀಡೆ ಮತ್ತು ಕಲಿಕೆಯಲ್ಲಿ ಸದಾ ಮುಂಚೂಣಿಯಲ್ಲಿದ್ದಾರೆ. ಆದರೆ ಇವರಿಗೆ ಸೂಕ್ತ ಪ್ರೋತ್ಸಾಹ ಸಿಗುತ್ತಿಲ್ಲ. ಒಂದು ವೇಳೆ ಪ್ರೋತ್ಸಾಹ ದೊರೆತರೆ ರಾಜ್ಯ, ರಾಷ್ಟ್ರ ಮಟ್ಟದ ಕ್ರೀಡೆಯಲ್ಲಿ ಭಾಗವಹಿಸುವ ಸಾಮರ್ಥ್ಯ ಇವರಿಗಿದೆ ಎಂದರು.

ಎಸ್.ಡಿ.ಎಂ.ಸಿ ಅಧ್ಯಕ್ಷ ಶ್ರೀಶೈಲ ಹಿಪ್ಪರಗಿ, ಎಸ್.ಡಿ.ಎಂ.ಸಿ ಸದಸ್ಯರಾದ ದೇವಿಂದ್ರ, ಕೋಟಾರಗಸ್ತಿ, ವಿಶ್ವನಾಥ ನಾವಿ ಮಾತನಾಡಿ, ಗ್ರಾಮೀಣ ಭಾಗದ ಮಕ್ಕಳಲ್ಲಿ ಪ್ರತಿಭೆ ಇದೆ. ಪ್ರೋತ್ಸಾಹ ಇಲ್ಲ ಹೀಗಾಗಿ ಮಕ್ಕಳಲ್ಲಿ ಕ್ರೀಡಾ ಆಸಕ್ತಿ ಕುಗ್ಗುತ್ತಿದೆ. ಕ್ರೀಡಾ ಮನೊಬಲ ತುಂಬವ ಸತ್ಕಾರ್ಯವಾಗಬೇಕು. ಆರಕ್ಷಕ ಮೌಲಾಲಿ ಆಲಗೂರ ವಿದ್ಯಾರ್ಥಿಗಳಿಗೆ ಕ್ರೀಡಾ ಸಮವಸ್ತ್ರ ವಿತರಿಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವ ಕೆಲಸ ಮಾಡಿದ್ದಾರೆ. ಅವರ ಈ ನಿಸ್ವಾರ್ಥ ಸೇವೆ ಶ್ಲಾಘನೀಯ ಮತ್ತು ಅಭಿನಂದನಾರ್ಹ ಎಂದರು.

ಇದೇ ವೇಳೆ ಮೌಲಾಲಿ ಆಲಗೂರಗೆ ಸನ್ಮಾನಿಸಲಾಯಿತು. ಶಾಲಾ ಮುಖ್ಯ ಗುರುಗಳಾದ ಡಿ.ಕೆ ಜವಳಗಿ, ದೈಹಿಕ ಶಿಕ್ಷಕ ಶಿವಾನಂದ ದೇಸಾಯಿ, ಮಡಿವಾಳಪ್ಪ ಸೇರಿದಂತೆ ಶಾಲಾ ಮಕ್ಕಳು ಭಾಗವಹಿಸಿದ್ದರು.



ನಾಳೆ ಬಿ.ಎಲ್.ಡಿ.ಇ ಸಂಸ್ಥೆ ಸಂಸ್ಥಾಪನಾ ದಿನ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಸಂಸ್ಥಾಪನಾ ದಿನ ಕಾರ್ಯಕ್ರಮ ನವೆಂಬರ್ 6 ರಂದು ಶುಕ್ರವಾರ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಗ್ರಂಥಾಲಯ ಸಭಾಂಗಣದಲ್ಲಿ ನಡೆಯಲಿದೆ.

ಅಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಆಲಮೇಲ ವಿರಕ್ತಮಠದ ಶ್ರೀ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ಸಾನಿಧ್ಯ ವಹಿಸಲಿದ್ದಾರೆ. ಬಿ.ಎಲ್.ಡಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ.

ಈ ಸಮಾರಂಭದಲ್ಲಿ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಪ್ರತಿಭಾವಂತ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು.

ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ ಡಾ. ಎ. ಬಿ. ಪಾಟೀಲ ಅವರು, ಜಿ. ಕೆ. ಪಾಟೀಲ ಉಪಸ್ಥಿತರಿರಲಿದ್ದಾರೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಪ್ರಾಚಾರ್ಯ ಡಾ. ಅಶೋಕ ಪಾಟೀಲ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಅರಿವು ರಿನ್ಯೂವಲ್ ಸಾಲ ಯೋಜನೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 2026-27ನೇ ಸಾಲಿನ ಅರಿವು ರಿನ್ಯೂವಲ್ ಸಾಲ ಯೋಜನೆಯಡಿ ಅರ್ಜಿ ಸಲ್ಲಿಸುವ ಅವಧಿಯನ್ನು ನವೆಂಬರ್ 15ರವರೆಗೆ ವಿಸ್ತರಿಸಲಾಗಿದೆ.

ಕೆಇಎ ನಡೆಸುವ ಸಿಇಟಿ, ನೀಟ್, ಡಿ-ಸಿಇಟಿ ಹಾಗೂ ಪಿಜಿ-ಸಿಇಟಿ ಮೂಲಕ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಆಯ್ಕೆಯಾದ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ವಿಜಯಪುರ ಜಿಲ್ಲಾ ಕಚೇರಿಯ ದೂರವಾಣಿ ಸಂಖ್ಯೆ 08352-278344, 8277944209 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ಜಿಲ್ಲಾ ವ್ಯವಸ್ಥಾಪಕರ ಪ್ರಕಟಣೆ ತಿಳಿಸಿದೆ.

ನ.6ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹೆಸ್ಕಾಂ ವತಿಯಿಂದ 11 ಕೆ.ವಿ. ಎಲ್.ಬಿ.ಎಸ್. ಮತ್ತು ಎಸ್.ಟಿ.ಪಿ. ಫೀಡರ್‌ಗಳ ವ್ಯಾಪ್ತಿಯಲ್ಲಿ ಹೊಸ ಲಿಂಕ್ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಈ ನಗರ ಉಪವಿಭಾಗ-1ರ ಶಾಖೆ-2ರ ವ್ಯಾಪ್ತಿಯ ಇಂಡಿ ರಸ್ತೆ, ಬಿಜ್ಜರಗಿ ಶೋರೂಂ, ಜೈನ ಮಂದಿರ, ಉಪ್ಪಿನ ಕಾಲನಿ, ಬಿಜ್ಜರಗಿ ಆಯಿಲ್ ಮಿಲ್, ರಾಜರತ್ನ ಕಾಲನಿ, ಧನಲಕ್ಷ್ಮಿ ನಗರ, ರಜಪೂತ ಗಲ್ಲಿ, ವಡ್ಡರ ಗಲ್ಲಿ, ಇನಾಮದಾರ ಕಾಲನಿ, ಕಾಳಿಕಾ ನಗರ, ನಾಲಬಂದ ಚೌಕ್, ಅಂಚೆ ಕಚೇರಿ, ಬಸವೇಶ್ವರ ವೃತ್ತ, ಎಪಿಎಂಸಿ, ಶಿವನಗರ, ತರಕಾರಿ ಮಾರುಕಟ್ಟೆ, ಕಲಾದಗಿ ಗಲ್ಲಿ ಹಾಗೂ ಎಸ್.ಟಿ.ಪಿ. ಪ್ಲಾಂಟ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನ.6ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಸಾರ್ವಜನಿಕರು ಸಹಕರಿಸುವಂತೆ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಅಲ್ಪಸಂಖ್ಯಾತ ಬಿ.ಎಡ್ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026-27ನೇ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಬಿ.ಎಡ್. ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಶನ್ ನಿಂದ ಮಾನ್ಯತೆ ಪಡೆದಿರುವ ಸರ್ಕಾರಿ, ಅರೆ ಸರ್ಕಾರಿ ಹಾಗೂ ಖಾಸಗಿ ಬಿ.ಎಡ್. ಕಾಲೇಜುಗಳಲ್ಲಿ 2026-27ನೇ ಸಾಲಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಹಾಗೂ ಪಾರ್ಸಿ ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ನವೆಂಬರ್ 4ರಿಂದ ಆರಂಭವಾಗಿ ನ.30ರ ಸಂಜೆ 5.30ರವರೆಗೆ ಅವಕಾಶ ಕಲ್ಪಿಸಲಾಗಿದೆ. ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಅರ್ಜಿ ನಮೂನೆ ಪಡೆದು, ಅಗತ್ಯ ಮಾಹಿತಿಗಳನ್ನು ಭರ್ತಿ ಮಾಡಿ, ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮತ್ತು ತಾಲೂಕು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿ ಅಥವಾ ದೂರವಾಣಿ ಸಂಖ್ಯೆಗೆ 08352-295523, ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಾದ, ವಿಜಯಪುರ 8123710766, ಬಸವನಬಾಗೇವಾಡಿ: 9972340721, ಮುದ್ದೇಬಿಹಾಳ:8722445552, ಇಂಡಿ: 9900109759 ಹಾಗೂ ಸಿಂದಗಿ:9035558609 ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಪ್ರಕಟಣೆ ತಿಳಿಸಿದೆ.

ದೀಪಾವಳಿ: ಬೆಂಗಳೂರಿನಿಂದ ಹೆಚ್ಚುವರಿ ಸಾರಿಗೆ ಕಾರ್ಯಾಚರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ವಿಜಯಪುರಕ್ಕೆ ಆಗಮಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗದಿಂದ ನವೆಂಬರ್ 5ರಿಂದ 7ರವರೆಗೆ ಹೆಚ್ಚುವರಿ ವಿಶೇಷ ಬಸ್‌ಗಳನ್ನು ಕಾರ್ಯಾ

ಚರಣೆಗೊಳಿಸಲಾಗುತ್ತಿದೆ.

ಬೆಂಗಳೂರಿನಿಂದ ವಿಜಯಪುರ ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲೆಯ ತಾಲೂಕು ಕೇಂದ್ರಗಳಿಗೆ ನವೆಂಬರ್ 5ರಂದು 29, ನವೆಂಬರ್ 6ರಂದು 58 ಹಾಗೂ ನವೆಂಬರ್ 7ರಂದು 31 ಹೆಚ್ಚುವರಿ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ. ಈಗಾಗಲೇ ಮುಂಗಡ ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆ ಕಲ್ಪಿಸಲಾಗಿದ್ದು, ಪ್ರಯಾಣಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಅದೇ ರೀತಿ ಬೆಂಗಳೂರಿಗೆ ಮರಳುವ ಪ್ರಯಾಣಿಕರ ಅನುಕೂಲಕ್ಕಾಗಿ ನವೆಂಬರ್ 11 ಮತ್ತು 12ರಂದು ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ಬಸ್‌ಗಳನ್ನು ಕಾರ್ಯಾಚರಣೆ ಮಾಡಲಾಗುವುದು.

ಪ್ರಯಾಣಿಕರು ಈ ವಿಶೇಷ ಸಾರಿಗೆ ವ್ಯವಸ್ಥೆಯ ಸದುಪಯೋಗ ಪಡೆದುಕೊಳ್ಳುವಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರ: ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2026-27ನೇ ಸಾಲಿನ ಮೌಲಾನಾ ಅಬುಲ್ ಕಲಾಂ ಆಜಾದ್ ಪ್ರತಿಭಾ ಪುರಸ್ಕಾರಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿಯೇ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಸಿಖ್, ಪಾರ್ಸಿ ಹಾಗೂ ಬೌದ್ಧ ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಆಸಕ್ತರು ನ.30ರೊಳಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಜಯಪುರ ದೂ.ಸಂಖ್ಯೆ 08352-295523, ಜಿಲ್ಲಾ ಮಾಹಿತಿ ಕೇಂದ್ರ, ವಿಜಯಪುರ ದೂ.ಸಂಖ್ಯೆ 8123710766, ತಾಲ್ಲೂಕು ಮಾಹಿತಿ ಕೇಂದ್ರಗಳಾದ ಮುದ್ದೇಬಿಹಾಳ ದೂ. ಸಂಖ್ಯೆ 8722445552 ಬಸವನ ಬಾಗೇವಾಡಿ ದೂರವಾಣಿ ಸಂಖ್ಯೆ,9972340721, ಸಿಂದಗಿ 9035558609 ಹಾಗೂ ಇಂಡಿ 9900109759 ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಕಾರ್ಖಾನೆಯಲ್ಲಿ ಯಂತ್ರ ಸಿಡಿದು ಕಾರ್ಮಿಕ ಸಾವು

ಕಲಬುರಗಿ. ಜಿಲ್ಲೆಯ ಚಿಂಚೋಳಿ ತಾಲೂಕಿನ ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯಲ್ಲಿ ಯಂತ್ರೋಪಕರಣ ಸಿಡಿದು ಬಡಿದ ಪರಿಣಾಮ ಓರ್ವ ಕಾರ್ಮಿಕ ಮೃತಪಟ್ಟಿದ್ದು, ಇಬ್ಬರು ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.ಬಿಹಾರ ಮೂಲದ ಅಜಿತ್ ಕುಮಾರ್ (32) ಮೃತಪಟ್ಟ ಕಾರ್ಮಿಕ. ಉದ್ಯೋಗ ಅರಸಿ ಬಿಹಾರದಿಂದ ಚಿಂಚೋಳಿಗೆ ಬಂದಿದ್ದ ಅಜಿತ್ ಕುಮಾರ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು.

ಸಿಮೆಂಟ್ ಕಂಪನಿಯ ಮಿಲನಲ್ಲಿ ಕಪ್ಲಿಂಗ್ ಒಡೆದ ಪರಿಣಾಮ ಯಂತ್ರೋಪಕರಣಗಳು ಸಿಡಿದು ಕಾರ್ಮಿಕರಿಗೆ ಬಡಿದಿವೆ.ಘಟನೆಯಲ್ಲಿ ಮಹಿಪಾಲರೆಡ್ಡಿ ಹಾಗೂ ಮನುಕುಮಾರ್ ಗಂಭೀರವಾಗಿ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ತಾಳಿಕೋಟೆ ಹಾಗೂ ಮುದ್ದೇಬಿಹಾಳ ತಾಲೂಕು ಪಂಚಾಯಿತಿಗಳ ಪ್ರಗತಿ ಪರಿಶೀಲನಾ ಸಭೆ

ಕುಡಿವ ನೀರು ಪೂರೈಸದ ಅಧಿಕಾರಿಗೆ ತಾಪಂ ಇಒ ತರಾಟೆ!

■ ಉದಯರಶ್ಮಿ ದಿನಪತ್ರಿಕೆ



ತಾಳಿಕೋಟೆ: ಹರನಾಳ ಹಾಗೂ ಗಡಿಸೋಮನಾಳ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದರೂ ಹಲವು ಬಾರಿ ಮೌಖಿಕವಾಗಿ ಹಾಗೂ ಪತ್ರದ ಮೂಲಕ ಮನವಿ ಮಾಡಿದರೂ ನೀರು ಪೂರೈಕೆಗೆ ಕ್ರಮ ಕೈಗೊಳ್ಳದಿರುವುದಕ್ಕೆ ತಾಳಿಕೋಟೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅನಸೂಯಾ ಚಲವಾದಿ ಅವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಭಿಯಂತರ ಸಿ.ಎಲ್.ರಾಠೋಡ ಅವರನ್ನು ಸಭೆಯಲ್ಲಿಯೇ ತರಾಟೆಗೆ ತೆಗೆದುಕೊಂಡರು.

ಮಂಗಳವಾರ ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಳಿಕೋಟೆ ಹಾಗೂ ಮುದ್ದೇಬಿಹಾಳ ತಾಲೂಕು ಪಂಚಾಯಿತಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಘಟನೆ ನಡೆಯಿತು.

ಹರನಾಳ ಹಾಗೂ ಗಡಿಸೋಮನಾಳ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಕುರಿತು ನಮ್ಮ ಇಲಾಖೆಯಿಂದ ಹಲವು ಬಾರಿ ಮೌಖಿಕವಾಗಿ ತಿಳಿಸಲಾಗಿದೆ. ಅಲ್ಲದೇ, ಪತ್ರದ ಮೂಲಕವೂ ಗಮನಕ್ಕೆ ತರಲಾಗಿದೆ. ಆದರೂ ನೀರು ಪೂರೈಸುವ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಗ್ರಾಮಸ್ಥರ ವಿರೋಧವನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ನಮ್ಮ ಇಲಾಖೆ ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಧಿಕಾರಿಯ ನಿರ್ಲಕ್ಷದ ಕಾರ್ಯವೈಖರಿಯದ ಕುರಿತು ಅನಸೂಯಾ ಚಲವಾದಿ ಅಸಮಾಧಾನ ವ್ಯಕ್ತಪಡಿಸಿದರು.

ಇದೇ ಸಮಯದಲ್ಲಿ ಉಪಸ್ಥಿತರಿದ್ದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿ ಹಿರೇಗೌಡರ ಅವರಿಗೆ ಸೂಚನೆ ನೀಡಿದ ಅಧಿಕಾ-ರಿಗಳು ನೀರು ಪೂರೈಸುವ ಭರವಸೆ ನೀಡುವುದಷ್ಟೇ ಸಾಕಾಗುವುದಿಲ್ಲ. ಕೂಡಲೇ ಕಾರ್ಯಪ್ರವೃತ್ತರಾಗಿ ಗ್ರಾಮಗಳಿಗೆ ನೀರು ಪೂರೈಸಲು ಸೂಚನೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ತಾಪಂ ಆಡಳಿತಾಧಿಕಾರಿ ಹಾಗೂ ವಿಜಯಪುರ ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಮಾತನಾಡಿ, ಈ ಬಾರಿ ಇಡೀ ರಾಜ್ಯದಲ್ಲಿ ಅದರಲ್ಲೂ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಹಾಗೂ ತಾಳಿಕೋಟೆ ತಾಲೂಕುಗಳಲ್ಲಿ ವಾಡಿಕೆಗಿಂತ ಅತೀ ಕಡಿಮೆ ಮಳೆಯಾಗಿದೆ. ಇದ-ರಿಂದ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಳ್ಳುವ ಸಾಧ್ಯತೆಯಿದ್ದು, ಅಧಿಕಾರಿಗಳು ಈಗಿನಿಂದಲೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಸತೀಶ ತಿವಾರಿ ಅವರು ಆರೋಗ್ಯ ಇಲಾಖೆಯ ಪ್ರಗತಿ ವರದಿ ಮಂಡಿಸಿದ ಸಂದರ್ಭದಲ್ಲಿ ಮಾತನಾಡಿದ ಶಿವನಗೌಡ ಪಾಟೀಲ, ಆರೋಗ್ಯ ಇಲಾಖೆ ಸಾರ್ವಜನಿಕರಿಗೆ ಅತ್ಯಂತ ಪ್ರಮುಖ ಸೇವೆ ಒದಗಿಸುವ ಇಲಾಖೆಯಾಗಿದೆ. ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಸೌಲಭ್ಯ ಒದಗಿಸುವುದು ಇಲಾಖೆಯ ಜವಾಬ್ದಾರಿಯಾಗಿದೆ. ಈ ವಿಷಯದಲ್ಲಿ ಯಾವುದೇ ನಿರ್ಲಕ್ಷ್ಯ ತೋರಬಾರದು. ಇತ್ತೀಚೆಗೆ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ ಹೆಚ್ಚಾಗುತ್ತಿದ್ದು, ಇದನ್ನು ನಿಯಂತ್ರಿಸಲು ಅಗತ್ಯ ಕ್ರಮಗಳೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಿ: ಹೆಸ್ಕಾಂ ಅಧಿಕಾರಿಗಳಿಂದ ಎರಡೂ ತಾಲೂಕುಗಳ ವಿದ್ಯುತ್ ವ್ಯವಸ್ಥೆಯ ಕುರಿತು ಮಾಹಿತಿ ಪಡೆದ ಅವರು, ನೀರಿನ ಅಭಾವದ ಹಿನ್ನೆಲೆಯಲ್ಲಿ ವಿದ್ಯುತ್ ಪೂರೈಕೆಯ ಮೇಲೂ ಒತ್ತಡ ಉಂಟಾಗುವ ಸಾಧ್ಯತೆಯಿದೆ. ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಬೇಕು. ವಿದ್ಯುತ್‌ನ್ನು ಮಿತವಾಗಿ ಬಳಸುವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಶೈಕ್ಷಣಿಕ ಪ್ರಗತಿಗೆ ಇಲಾಖೆಗಳ ಸಮನ್ವಯ ಅಗತ್ಯ: ಗ್ರಾಮೀಣ ಭಾಗದ ಮಕ್ಕಳು ನಗರ ಪ್ರದೇಶಗಳ ಶಾಲೆಗಳಿಗೆ ತೆರಳಲು ಅನುಕೂಲವಾಗುವಂತೆ ಸಾಕಷ್ಟು ಸಾರಿಗೆ ಬಸ್‌ಗಳ ವ್ಯವಸ್ಥೆ ಕಲ್ಪಿಸಬೇಕು. ಶಾಲೆಗಳ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಶಾಲಾ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ತಾಳಿಕೋಟೆ ತಾಪಂ ಇಒ ಅನಸೂಯಾ ಚಲವಾದಿ, ಮುದ್ದೇಬಿಹಾಳ ತಾಪಂ ಇಒ ಸಂಗನಗೌಡ ಬಿರಾದಾರ, ತಾಪಂ ಸಹಾಯಕ ನಿರ್ದೇಶಕ ಕಸನಕ್ಕಿ, ಬಿಇಒ ಬಡದಾನಿ, ತಾಲೂಕು ಆರೋಗ್ಯಾಧಿಕಾರಿ ಡಾ.ಸತೀಶ ತಿವಾರಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಡಾ. ಎಂ.ಎಂ.ಬೆಳಗಲ್ಲ, ಕೃಷಿ ಇಲಾಖೆ ತಾಲೂಕು ಸಹಾಯಕ ನಿರ್ದೇಶಕ ಸುರೇಶ ಭಾವಿಕಟ್ಟಿ, ಸಿಡಿಪಿಒ ಶಿವಮೂರ್ತಿ ಕುಂಬಾರ, ಪುರಸಭೆ ಕಂದಾಯ ಅಧಿಕಾರಿ ಸುರೇಶ ಅಮ್ರಣ್ಣವರ, ಸೇರಿದಂತೆ ಎರಡೂ ತಾಲೂಕುಗಳ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ತಾಪಂ ಸಿಬ್ಬಂದಿ ಪಾಲ್ಗೊಂಡಿದ್ದರು.

ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸೂಕ್ತ ವೇದಿಕೆ

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸಿ, ಅವುಗಳನ್ನು ಅನಾವರಣಗೊಳಿಸಲು ಪ್ರತಿಭಾ ಕಾರಂಜಿ ಸೂಕ್ತ ವೇದಿಕೆಯಾಗಿದೆ ಎಂದು ಎಂ.ಬಿ. ಪಾಟೀಲ ಫೌಂಡೇಶನ್ ಕಾರ್ಯದರ್ಶಿ ಯಾಕುಬ ಜತ್ತಿ ಹೇಳಿದರು.

ತಾಲ್ಲೂಕಿನ ಘೋಣಸಗಿ ಗ್ರಾಮದ ಶ್ರೀ ಸತ್ಯಸಾಯಿಬಾಬಾ ಪ್ರೌಢಶಾಲೆಯಲ್ಲಿ ಬುಧವಾರ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳನ್ನು ಮಾನಸಿಕವಾಗಿ ಸಿದ್ಧಗೊಳಿಸುವುದರ ಜೊತೆಗೆ ಅವರಲ್ಲಿರುವ ಪ್ರತಿಭೆಗೆ ಸೂಕ್ತ ಪ್ರೋತ್ಸಾಹ ಹಾಗೂ ಸಹಕಾರ ನೀಡುವ ವೇದಿಕೆ ಇದಾಗಿದೆ. ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಉತ್ತಮ ಮಾರ್ಗದರ್ಶನ ನೀಡುತ್ತಿರುವ ಶಿಕ್ಷಕರ ಕಾರ್ಯ ಶ್ಲಾಘನೀಯ ಎಂದರು.

ಆರ್.ಎಚ್. ಭಜಂತ್ರಿ ಮಾತನಾಡಿ, ಪ್ರತಿಭಾ ಕಾರಂಜಿ ಕಾರ್ಯಕ್ರಮವುಮಕ್ಕಳವ್ಯಕ್ತಿತ್ವವಿಕಸನ,ಬೌದ್ಧಿಕಬೆಳವಣಿಗೆ ಹಾಗೂ ಸರ್ವತೋಮುಖ ಪ್ರಗತಿಗೆ ಸಹಕಾರಿಯಾಗಿದೆ. ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಲು ಇಂತಹ ಕಾರ್ಯಕ್ರಮಗಳು ಸಹಕಾರಿ. ಪ್ರತಿಯೊಬ್ಬರೂ ತಮ್ಮ ನಡೆ-ನುಡಿಹಾಗೂಕರ್ತವ್ಯವನ್ನುಗಮನದಲ್ಲಿಟ್ಟುಕೊಂಡು ಮುನ್ನಡೆಯಬೇಕು. ಮಗು, ಶಿಕ್ಷಕ ಮತ್ತು ಪೋಷಕರು ಒಟ್ಟಾಗಿ ಶ್ರಮಿಸಿದಾಗ ಮಾತ್ರ ಮಗುವಿನ ಸರ್ವತೋಮುಖ ಬೆಳವಣಿಗೆ ಸಾಧ್ಯ ಎಂದರು.

ಸಂಸ್ಥೆಯ ಮುಖ್ಯಗುರು ಎಂ.ಎಚ್. ಜಾಧವ ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆಗಳನ್ನು ಅನಾವರಣಗೊಳಿಸಲು ಪ್ರತಿಭಾ ಕಾರಂಜಿ ಸೂಕ್ತ ವೇದಿಕೆಯಾಗಿದೆ. ಮಕ್ಕಳ ಪ್ರತಿಭೆ ಹೆಮ್ಮರವಾಗಿ ಬೆಳೆದು ಅವರ ಮುಂದಿನ ಜೀವನ ಉಜ್ವಲವಾಗಲಿ ಎಂದು ಆಶಿಸಿದರು.ಸಿಆರ್‌ಪಿ ಕೆ.ಎಂ.ಗಳತಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನೌಕರರ ಸಂಘದ ನಿರ್ದೇಶಕ ಎಸ್.ಎನ್. ಬಾಗಲಕೋಟ, ಎಸ್.ಎನ್. ಗಗನಮಾಲಿ, ಪೈಗಂಬರ್ ಜತ್ತಿ, ಸಂಜೀವ ರಾಠೋಡ, ಸಿದ್ದಪ್ಪ ಮುಚ್ಚಂಡಿ, ಅಮೋಘ ಮಾಳಿ, ಎಸ್.ಬಿ.ಮಾಳಿ, ಜಿ.ಬಿರಾದಾರ ಉಪಸ್ಥಿತರಿದ್ದರು. ಎ.ಎಚ್. ಗಚ್ಚಿನಮಹಲ ಸ್ವಾಗತಿಸಿದರು. ಎನ್.ಎಲ್. ನಾಯಕ ನಿರೂಪಿಸಿದರು. ಆರ್.ಎಸ್. ಗಿರಿಗೌಡರ ವಂದಿಸಿದರು.

ಲಕ್ಷ್ಮೀಪುತ್ರಗೆ ಪ್ರಶಸ್ತಿ ಸಿಕ್ಕಿದ್ದು ನಮ್ಮೂರಿಗೆ ಹೆಮ್ಮೆ :ಪಾಟೀಲ

■ ಉದಯರಶ್ಮಿ ದಿನಪತ್ರಿಕೆ



ಅಕ್ಕಲಕೋಟ: ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕ ಲಕ್ಷ್ಮೀಪುತ್ರ ಕಿರನಳ್ಳಿ ಗೆ ಜಿಲ್ಲಾ ಪರಿಷದ ಕನ್ನಡ ಪ್ರಾಥಮಿಕ ಶಾಲೆಯ ವತಿಯಿಂದ ಸನ್ಮಾನ ಮಾಡಲಾಯಿತು

ಜೇವೂರ ಗ್ರಾಮದ ಶಿಕ್ಷಕ ಹಾಗೂ ಜಿಲ್ಲಾ ಪರಿಷದ ಕನ್ನಡ ಪ್ರಾಥಮಿಕ ಶಾಲೆಯ ಹಳೆಯ ವಿದ್ಯಾರ್ಥಿ ಲಕ್ಷ್ಮೀಪುತ್ರ ಕಿರನಳ್ಳಿ ರವರಿಗೆ ಇತ್ತೀಚೆಗೆ ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ,ಬೆಂಗಳೂರು ವತಿಯಿಂದ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿರುವ ಪ್ರಯುಕ್ತ ಶಾಲೆಯ ವತಿಯಿಂದ ಗೌರವ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಯಿತು.

ಸನ್ಮಾನ ಮಾಡಿ ಮಾತನಾಡಿದ ಶಾಲೆಯ ಮುಖ್ಯೋಪಾಧ್ಯಾಯ ರಾಜಶೇಖರ ಪಾಟೀಲ, ಲಕ್ಷ್ಮೀಪುತ್ರ ಕಿರನಳ್ಳಿ ರವರು ಅತ್ಯಂತ ಬಡತನದಲ್ಲಿ ಶಿಕ್ಷಣ ಪಡೆದು ಇಂದು ಕರ್ನಾಟಕದಲ್ಲಿ ಉತ್ತಮ ಆದರ್ಶ ಶಿಕ್ಷಕರಾಗಿ ಕಾರ್ಯ ಮಾಡುತ್ತಿದ್ದಾರೆ. ಮುಖ್ಯೋಪಾಧ್ಯಾಯರಾಗಿ ಶಾಲೆಯನ್ನು ಮಾದರಿ ಶಾಲೆಯಾಗಿ ಅಭಿವೃದ್ಧಿ ಮಾಡಿದ್ದಾರೆ. ಇವರು ಶಿಕ್ಷಣದ ಜೊತೆಗೆ ಸಾಮಾಜಿಕ ರಂಗದಲ್ಲೂ ವಿವಿಧ ಧಾರ್ಮಿಕ ,ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ವಿನೂತನ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಇವರ ಕಾರ್ಯ ಸ್ಮರಿಸಿ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಜೊತೆಗೆ ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ಇಂತಹ ಆದರ್ಶ ಶಿಕ್ಷಕರು ನಮ್ಮ ಶಾಲೆಯ ವಿದ್ಯಾರ್ಥಿಯಾಗಿದ್ದು ನಮ್ಮೂರಿಗೆ ಹೆಮ್ಮೆಯ ವಿಷಯ ಎಂದು ಶ್ಲಾಘಿಸಿದರು.ಈ ವೇಳೆ ಮುಖ್ಯೋಪಾಧ್ಯಾಯ ರಾಜಶೇಖರ ಕಾ. ಪಾಟೀಲ ಶಿಕ್ಷಕರಾದ ಮಹೇಶ ಮ್ಹೇತ್ರಿ,ಗಡ್ಡೆಪ್ಪ ಪತ್ರಿಗೀಡ ,

ವಿದ್ಯಾಧರ ಶಿವಶರಣ,ಸಂಗಯ್ಯ ವಸ್ತ್ರದ,ಕಾಶೀನಾಥ ಕೋಳಿ, ಸೋಮಣ್ಣಾ ಕುಂಭಾರ, ಜ್ಯೋತಿ ಚನಶೆಟ್ಟಿ , ಜಯಶ್ರೀ ಖಸ್ಕಿ,ಅರ್ಚನಾ ಅಡಕೆ, ಗಂಗೂಬಾಯಿ ಬಿರಾದಾರ, ಶಾಲೂಬಾಯಿ ಕೋರೆ,ಗುರುಸಿದ್ದ ಸಾವಳೆ, ಸಿಧ್ಧಾರಾಮ ಕೋನಳ್ಳಿ, ಶ್ರೀಶೈಲ ಚಪ್ಪಳಗಾಂವ, ಜ್ಯೋತಿ ವಘ್ಯಾಲೆ ಮುಂತಾದವರು ಉಪಸ್ಥಿತರಿದ್ದರು.

ಮಹಿಳಾ ಶಿಕ್ಷಣದಿಂದ ಸಾಧನೆ ಸಾಧ್ಯ, ಮಕ್ಕಳ ಹಕ್ಕುಗಳ ಅರಿವು ಅಗತ್ಯ: ಲತಾ ರವಿ ರಾಠೋಡ್

ಕಲಬುರಗಿ: ನಗರದ ಸೇಂಟ್ ಮೇರಿ ಚರ್ಚ ಮದರ್ ತೆರೇಸಾ ಸಭಾಂಗಣದಲ್ಲಿ ನ.2ರಂದು ಮಾರ್ಗದರ್ಶಿ ಸಂಸ್ಥೆಯ ವತಿಯಿಂದ ಜಿಲ್ಲಾಮಟ್ಟದ ಮಕ್ಕಳ ಹಕ್ಕುಗಳ ಸಂಸತ್-2026 ಕಾರ್ಯಕ್ರಮವನ್ನು ಆಯೋಜಿಸಲಾಗಿ-ತ್ತು.

ಕಾರ್ಯಕ್ರಮವನ್ನು ಕಲಬುರಗಿ ಮಹಾನಗರ ಪಾಲಿಕೆ ಸದಸ್ಯೆ ಹಾಗೂ ಮಾಜಿ ಮಹಿಳಾ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಲತಾ ರವಿ ರಾಠೋಡ್ ಉದ್ಘಾಟಿಸಿ ಮಾತನಾಡಿ, ಮಹಿಳೆಯಾಗಿ ತಾವು ನಡೆದುಬಂದ ಹಾದಿ, ಶಿಕ್ಷಣ ಪಡೆಯಲು ಎದುರಿಸಿದ ಸವಾಲುಗಳು ಹಾಗೂ ಶಿಕ್ಷಣದಿಂದ ಜೀವನದಲ್ಲಿ ಸಾಧಿಸಬಹುದಾದ ಯಶಸ್ಸಿನ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು. ಹೆಣ್ಣುಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಶಿಕ್ಷಣ ಪಡೆದ ಮಹಿಳೆ ತನ್ನ ಬದುಕನ್ನು ರೂಪಿಸಿಕೊಳ್ಳುವುದರ ಜೊತೆಗೆ ಸಮಾಜದಲ್ಲಿಯೂ ಮಹತ್ವದ ಬದಲಾವಣೆ ತರಲು ಸಾಧ್ಯ ಎಂದು ಹೇಳಿ ವಿದ್ಯಾರ್ಥಿನಿಯರಲ್ಲಿ ಆತ್ಮಸ್ಥೈರ್ಯ ತುಂಬಿದರು.

ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ಸೇಂಟ್ ಮೇರಿ ಚರ್ಚ ಪ್ರಾಂಶುಪಾಲರಾದ ಫಾದರ್ ಪ್ರವೀಣ್ ಜೋಸೆಫ್ ವಹಿಸಿದ್ದರು. ದೈವಾನುಗ್ರಹ ಮಾತೆ ಮಹಾದೇವಾಲಯದ ಮಹಾಗುರುಗಳು ಸಾನ್ನಿಧ್ಯ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಸೂರ್ಯಕಾಂತ್ ಜಮಖಂಡಿ ಮಾತನಾಡಿ, ಶಿಕ್ಷಣದ ಮಹತ್ವವನ್ನು ವಿವ-ರಿಸಿದರು. ಯಾವುದೇ ಕಾರಣಕ್ಕೂ ಮಕ್ಕಳು ಶಾಲೆಯಿಂದ ಹೊರಗುಳಿಯಬಾರದು. ಶಿಕ್ಷಣವು ಮಕ್ಕಳ ಭವಿಷ್ಯ ರೂಪಿಸುವ ಅಮೂಲ್ಯ ಅಸ್ತ್ರವಾಗಿದ್ದು, ಪ್ರತಿಯೊಬ್ಬ ಮಗುವೂ ಶಿಕ್ಷಣದ ಹಕ್ಕನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ವಿಶ್ವರಾಧ್ಯ ಇಚೇರಿ ಮಾತನಾಡಿ, ಮಕ್ಕಳಿಗೆ ಬದುಕುವ ಹಕ್ಕು, ಭಾಗವಹಿಸುವ ಹಕ್ಕು, ರಕ್ಷಣೆಯ ಹಕ್ಕು ಹಾಗೂ ವಿಕಾಸದ ಹಕ್ಕುಗಳಿದ್ದು, ಪ್ರತಿಯೊಂದು ಮಗುವಿನ ಹಕ್ಕುಗಳನ್ನು ಗೌರವಿಸಿ ರಕ್ಷಿಸುವುದು ಸಮಾಜದ ಜವಾಬ್ದಾರಿಯಾಗಿದೆ ಎಂದು ಮಕ್ಕಳ ಹಕ್ಕುಗಳ ಕುರಿತು ಸವಿಸ್ತಾರವಾಗಿ ತಿಳಿಸಿದರು.

ಮಾರ್ಗದರ್ಶಿ ಸಂಸ್ಥೆಯ ನಿರ್ದೇಶಕ ಆನಂದರಾಜ್ ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳ ಸಂಸನ ಉದ್ದೇಶ, ಕಾರ್ಯವೈಖರಿ ಹಾಗೂ ಅದರ ಮಹತ್ವವನ್ನು ವಿವ-ರಿಸಿದರು. ಜಿಲ್ಲಾಮಟ್ಟದ ಮಕ್ಕಳ ಹಕ್ಕುಗಳ ಸಂಸತ್-2026ರಲ್ಲಿ ಆಯ್ಕೆಯಾಗುವ ಮಕ್ಕಳಿಗೆ ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸುವ ಅವಕಾಶ ದೊರೆಯಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ತೀರ್ಪುಗಾರರಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಪರಿವೀಕ್ಷಣಾಧಿಕಾರಿ ಭರತೇಶೀಲವಂತ, ಬಸವರಾಜ್ ಎನ್., ಡಾನ್ ಬಾಸ್ಕೋ ಸಂಸ್ಥೆಯ ಸಹನಿರ್ದೇಶಕಿ ಗೀತಾ ಹಾಗೂ ಮಕ್ಕಳ ಸಹಾಯವಾಣಿಯ ಸಮಾಜಸೇವಕ ಸಂತೋಷ್ ಕುಮಾರ್ ಕಾರ್ಯನಿರ್ವಹಿಸಿದರು.

ಜಿಲ್ಲಾಮಟ್ಟದ ಮಕ್ಕಳ ಹಕ್ಕುಗಳ ಸಂಸತ್-2026ರಲ್ಲಿ ಭಾಗವಹಿಸಿ, ರಾಜ್ಯಮಟ್ಟದ ಮಕ್ಕಳ ಹಕ್ಕುಗಳ ಸಂಸತ್-2026ಕ್ಕೆ ಆಯ್ಕೆಯಾದ ಮೀಣಜಿಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕುಮಾರಿ ಮೀನಾಕ್ಷಿ ಹಾಗೂ ಕಲಬುರಗಿಯ ಸರ್ಕಾರಿ ಬಾಲಕಿಯರ ಬಾಲಮಂದಿರದ ಕುಮಾರಿ ಬಸಮ್ಮ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸರ್ಕಾರಿ ಬಾಲಕರ ಪರಿವೀಕ್ಷಣಾ ನಿಲಯದ ಅಧೀಕ್ಷಕರು ಹಾಗೂ ಪ್ರಭಾರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಮಕ್ಕಳ ಸಹಾಯವಾಣಿಯ ಸಂಯೋಜಕ ಬಸವರಾಜ್ ತೆಂಗಳಿ, ಆಪ್ತ ಸಮಾಲೋಚಕ ಮಲ್ಲಯ್ಯ ಗುತ್ತೇದಾರ್, ಜಿಲ್ಲೆಯ ವಿವಿಧ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು, ಸರ್ಕಾರಿ ಬಾಲಕಿಯರ ಬಾಲಮಂದಿರದ ಮಕ್ಕಳು, ಶಿಕ್ಷಕ ವೃಂದದವರು ಹಾಗೂ ಮಾರ್ಗದರ್ಶಿ ಸಂಸ್ಥೆಯ ಸಿಬ್ಬಂದಿ ಭಾಗವಹಿಸಿದ್ದರು.